ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನ.ರಾ.ಚೌಕ, ಬೆಂಗಳೂರು–560002.

ದಿನಾಂಕ: 17–08–2016ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳು

* * * * *

ವಿಷಯ ಸಂಖ್ಯೆ: ಸಾನ್ಯಾಸ್ಥಾಸ/19/2016–17

ವಿಶೇಷ ಆಯುಕ್ತರು (ಕಲ್ಯಾಣ)ರವರ ಟಿಪ್ಪಣಿ ದಿನಾಂಕ 04–08–2016ರಲ್ಲಿ ವಿವರಿಸಿರುವಂತೆ, 2016–17ನೇ ಸಾಲಿನ ಕಲ್ಯಾಣ ವಿಭಾಗದ ಅನುಧಾನದ ಹಂಚಿಕೆ ಮತ್ತು ಕ್ರಿಯಾಯೋಜನೆಯ ಅನುಮೋದನೆ ನೀಡುವ ಕುರಿತು ಈ ಕೆಳಕಂಡಂತೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

2016–17ನೇ ಸಾಲಿನ ಆಯವ್ಯಯ ಅಂದಾಜುಗಳ ಪುಸ್ತಕದಲ್ಲಿ ಕಲ್ಯಾಣ ವಿಭಾಗದ ವಿವಿಧ ಲೆಕ್ಕಶೀಷಿಕೆಗಳಲ್ಲಿ ನಿಗದಿಪಡಿಸಿರುವ ಅನುಧಾನಗಳ ವಿವರಗಳು:

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶಗಳನ್ವಯ 2016–17ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯವು ಅನುಮೋದನೆಗೊಂಡಿರುತ್ತದೆ. ಆಯವ್ಯಯದಲ್ಲಿ ಶೇ.24.10%ರ ಅನುದಾನದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ, ಕಾರ್ಯಕ್ರಮ/ವಸತಿ ನಿರ್ಮಾಣ/ಕಾಮಗಾರಿಗಳು, ಮಹಿಳಾ ಕಲ್ಯಾಣ ಕಾರ್ಯಕ್ರಮ ಹಾಗೂ ವಿಕಲಚೇತನರು, ಮಂಗಳಮುಖಿಯರು ಮತ್ತು ಸಾಮಾನ್ಯ ವರ್ಗದವರ ಇತ್ಯಾದಿ ಕಾರ್ಯಕ್ರಮಗಳಿಗೆ ಚಾಲ್ತಿ ಅನುದಾನವನ್ನು ಕೆಳಕಂಡಂತೆ ನಿಗದಿಪಡಿಸಿರುವ ವಿವರಗಳನ್ನು ಅನುಬಂಧ–01ರಲ್ಲಿ ಲಗತ್ತಿಸಿದೆ.

2. ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ತೀರ್ಮಾಕ್ಕಾಗಿ ಸಲ್ಲಿಸಿರುವ ಪ್ರಸ್ತಾವನೆಗಳು:

2.1 2015–16ನೇ ಸಾಲಿನ ಖರ್ಚಾಗದೇ ಉಳಕೆಯಾದ ಅರ್ಹ ಚಾಲ್ತಿ ಅನುದಾನವನ್ನು 2016–17ನೇ ಸಾಲಿಗೆ ನಿಯಮಾವಳಿಯಂತೆ ಮುಂದುವರೆಸುವ ಬಗ್ಗೆ :

2.1.1 2015–16ನೇ ಸಾಲಿನ ಅನುಧಾನದ ಹಂಚಿಕೆ ಮತ್ತು ಕ್ರಿಯಾಯೋಜನೆಗೆ ಮಾನ್ಯ ಆಯುಕ್ತರು ರವರ ಅನುಮೋದನೆ ದಿನಾಂಕ:05–01–2016 ರಲ್ಲಿ ನೀಡಿರುವ ಅನುದಾನಕ್ಕೆ ಅನುಗುಣವಾಗಿ ಕಲ್ಯಾಣ ಕಾರ್ಯಕ್ರಮಗಳ ಕ್ರಿಯಾಯೋಜನೆ ಅನುಮೋದನೆಯಾಗಿದ್ದು, ಈ ಆಧಾರದ ಮೇಲೆ 2015–16ನೇ ಸಾಲಿನ ಕ್ರಿಯಾಯೋಜನೆಯಲ್ಲಿ ನಿಗಧಿಪಡಿಸಿರುವ ಅನುದಾನಕ್ಕೆ ಅನುಗುಣವಾಗಿ ವಲಯ

V. S. Ravi
ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾ.ಬ.

ಮಟ್ಟದಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ, ಟೆಂಡರ್ ಪ್ರಕ್ರಿಯೆಗೆ ಸಿದ್ಧತ ಮಾಡಿಕೊಂಡಿದ್ದು, ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ರೀತಿಯ ಕ್ರಮವಹಿಸಲಾಗಿದ್ದು, 2015–16ನೇ ಸಾಲಿನ ಆರ್ಥಿಕ ವರ್ಷ ಮುಕ್ತಾಯಗೊಂಡಿದ್ದು ಆರ್ಥಿಕ ವರ್ಷಾಂತ್ಯದೊಳಗೆ ಕಾರ್ಯಕ್ರಗಳನ್ನು ಅನುಷ್ಠಾನಗೊಂಡಿರುವುದಿಲ್ಲ.

2.1.2 ಮೇಲ್ಕಂಡಂತೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮತ್ತು ಮಾನ್ಯ ಆಯುಕ್ತರ ಆದೇಶದಂತೆ 2015–16ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕೆ ವಲಯ ಮಟ್ಟದಲ್ಲಿ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುತ್ತಿದ್ದು, ಕೆಲವು ವಲಯಗಳಲ್ಲಿ ಈಗಾಗಲೇ ಟೆಂಡರ್ ಪ್ರಕ್ರಿಯೆ ಕೈಗೊಂಡಿದ್ದು, ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಸರಬರಾಜು ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಕಾಗಿದೆ. ಅಲ್ಲದೇ ನಿಯಮಾನುಸಾರ ಮಾರ್ಗಸೂಚಿಯನ್ವಯ ಟೆಂಡರ್ ರಹಿತ ಕಾರ್ಯಕ್ರಮಗಳಾದ ಶಾಲಾ/ಕಾಲೇಜು ಶುಲ್ಕಗಳ ಮರುಪಾವತಿ ನೀಡುವ ಕಾರ್ಯಕ್ರಮಗಳಿಗೂ ಸಹಾ ವಲಯ ಮಟ್ಟದಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದ್ದು ಸೌಲಭ್ಯಗಳನ್ನು ವಿತರಿಸುವ ಹಂತದಲ್ಲಿರುತ್ತದೆ. ಆದುದರಿಂದ ಈ ಎಲ್ಲಾ ಕಾರ್ಯಕ್ರಮಗಳನ್ನು 2015–16ನೇ ಸಾಲಿನ ಕ್ರಿಯಾಯೋಜನೆಯಲ್ಲಿನ ಅವಕಾಶಗಳು ಕಾರ್ಯಕ್ರಮ ಹಾಗು ಅನುದಾನದ ಲಭ್ಯತೆ ಮೇರೆಗೆ 2016–17ನೇ ಸಾಲಿನಲ್ಲಿ ಮುಂದುವರೆಸಿಕೊಂಡು ಸದರಿ ಕಾರ್ಯಕ್ರಮಗಳಿಗೆ 2016–17ನೇ ಸಾಲಿಗೆ 2015–16ನೇ ಸಾಲಿನ ಆಯವ್ಯಯದ ಅನುದಾನದಿಂದ ಮುಂದುವರಿಸಲಾದ ಅರ್ಹ ಉಳಿಕೆ ಅನುದಾನದಲ್ಲಿ ವೆಚ್ಚ ಭರಿಸಲು ಅನಮೋದನೆ ಕೋರಿದೆ.

2.2 ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳಲ್ಲಿ (ಅ) ಮೆಟ್ರಿಕ್ ಪೂರ್ವ, (ಆ) ಮೆಟ್ರಿಕ್ ನಂತರ ಮತ್ತು (ಇ) ಉನ್ನತ ವ್ಯಾಸಂಗ ಮಾಡುತ್ತಿರುವ (i) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ, (ii) ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು, ಮತ್ತು (iii) ಪೌರಕಾರ್ಮಿಕರು ಹಾಗೂ "ಡಿ" ಗ್ರೂಪ್ ಗ್ಯಾಂಗ್ ಮೆನ್ ಮಾಲಿಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ವಿವಿಧ ಯೋಜನೆಗಳಿಗೆ ವಿಭಿನ್ನ ವಿಷಯ ಹಾಗೂ ವರ್ಗವಾರು ಮಾರ್ಗಸೂಚಿಗಳು ಜಾರಿಯಲ್ಲಿದ್ದು, ವ್ಯಾಸಂಗದ ವಿಷಯ(Different Courses), ಶಾಲಾ ಕಾಲೇಜುಗಳು(Government, Government Aided, Private etc) ಇತ್ಯಾಧಿಗಳಿಗೆ ಸಂಬಂಧಿಸಿಂತೆ ವ್ಯತ್ಯಾಸವಿದ್ದು ಗೊಂದಲವಿರುತ್ತದೆ. ಕಾರಣ ಈ ಬಗ್ಗೆ ಪರಿಶೀಲಿಸಿ ಒಂದೇ ರೀತಿಯ ಶಿಕ್ಷಣಕ್ಕೆ ಸಂಬಂಧಪಟ್ಟ ಯೋಜನೆಯನ್ನು ರೂಪಿಸುವ ಬಗ್ಗೆ ನಿರ್ದೇಶನ ಕೋರಿದೆ.

ಅಧ್ಯಕ್ಷರು

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

55

(3)

2.2.1 ಶಿಕ್ಷಣ ಕಾರ್ಯಕ್ರಮಗಳಡಿಯಲ್ಲಿ (ಅ) ವಿದ್ಯಾರ್ಥಿ ವೇತನ (ಆ) ಪ್ರತಿಬಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಅಥವಾ (ಇ) ಶುಲ್ಕ ಮರುಪಾವತಿ ಬಗ್ಗೆ ಯೋಜನೆಯನ್ನು ರೂಪಿಸುವ ಬಗ್ಗೆ.

2.3 <u>ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅನುಧಾನಗಳಿಗೆ ಸಂಬಂಧಿಸಿದಂತೆ</u>:

2.3.1 ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ/23/ಪಿಎನ್‌ಜಿ/2014 ದಿನಾಂಕ:18–09–2014, ಮತ್ತು ಸುತ್ತೋಲೆ ಸಂಖ್ಯೆ:ನಅಇ 32 ಪಿಎನ್‌ಜಿ 2015 ದಿನಾಂಕ:30–07–2015 ರಲ್ಲಿ ಶೇ.24.10%ರ ಅನುದಾನವನ್ನು ಪರಿಶಿಷ್ಟ ಜಾತಿಯವರಿಗೆ ಶೇ.17.15%ರಷ್ಟು ಹಾಗೂ ಪರಿಶಿಷ್ಟ ಪಂಗಡದವರಿಗೆ ಶೇ.6.95% ರಂತೆ ಹಂಚಿಕೆ ಮಾಡಲು ಸೂಚಿಸಿದ್ದು, ಅದರಂತೆ 2016–17ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳಿಗೆ ಈ ಮೇಲಿನಂತೆ ನಿಗಧಿಪಡಿಸಿರುವ ಅನುದಾನವನ್ನು ಹಂಚಿಕೆ ಮಾಡಬೇಕಾಗಿರುತ್ತದೆ.

2.3.2 ಈ ಹಿಂದಿನ ಸಾಲುಗಳಲ್ಲಿ ಶೇ.24.10%ರ ಅನುದಾನವನ್ನು ಆಯಾ ವಾರ್ಡ್‌ಗಳಲ್ಲಿ ವಾಸವಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆಯ ಅನುಗುಣವಾಗಿ ಹಂಚಿಕೆ ಮಾಡಲಾಗಿರುತ್ತದೆ. ಅದರಂತೆ 2016–17ನೇ ಸಾಲಿನ ಆಯವ್ಯಯ ಅಂದಾಜಿನ ಪುಸ್ತಕದಲ್ಲಿ ಶೇ.24.10%ರಡಿ ವಿವಿಧ ಲೆಕ್ಕಶೀರ್ಷಿಕೆಯಡಿ ಕಾಯ್ದಿರಿಸಿರುವ ಅನುದಾನವನ್ನು ಪಾಲಿಕೆ ವ್ಯಾಪ್ತಿಯಲ್ಲಿನ ಎಂಟು ವಲಯಗಳ 198–ವಾರ್ಡ್‌ಗಳಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆಗೆ ಅನುಗುಣವಾಗಿ ಹಂಚಿಕೆ ಮಾಡಬೇಕಾಗಿರುತ್ತದೆ.

2.3.3 ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ 2011ರ SECC ಜನಗಣತಿ ವರದಿಯನ್ನು 2015 ನೇ ಸಾಲಿನಲ್ಲಿ ಲೋಕಾರ್ಪಣೆ ಮಾಡಲಾಗಿದ್ದು, ಸದರಿ ವರದಿಯನ್ವಯ ಪಾಲಿಕೆಯ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆಯ ಅನುಗುಣವಾಗಿ 2016–17ನೇ ಸಾಲಿನ ಶೇ.24.10%ರ ಅನುಧಾನದಡಿಯಲ್ಲಿನ ಕಲ್ಯಾಣ ಕಾರ್ಯಕ್ರಮಗಳು, ಮತ್ತು ಮೂಲಭೂತ ಸೌಕರ್ಯಗಳ ಕಾಮಗಾರಿಗಳಿಗೆ ಅನುದಾನವನ್ನು ಮರುಹಂಚಿಕೆ ಮಾಡುವ ಸಂಬಂಧ ವಿವರಗಳನ್ನು ಸಿದ್ಧಪಡಿಸಿ <u>ಅನುಬಂಧ–02 ರಲ್ಲಿ ಲಗತ್ತಿಸಿದೆ.</u>

2.3.4 ಪಿಕೋಡ್–2021 ಪ.ಜಾ/ಪ.ಪಂರವರಿಗೆ ವಸತಿ ಸೌಲಭ್ಯಗಳಿಗೆ (ವ್ಯಕ್ತಿಗತ ಸೌಲಭ್ಯ) ರೂ.23760.00 ಲಕ್ಷಗಳ ಚಾಲ್ತಿ ಅನುದಾನವನ್ನು 2016–17ನೇ ಸಾಲಿನ ಆಯವ್ಯಯ ಭಾಷಣ ಮತ್ತು ಆಯವ್ಯಯ ಅಂದಾಜು ಪುಸ್ತಕದಲ್ಲಿ ನಮೂದಿಸಿರುವ ಹಾಗೆ ಪ್ರತಿ ವಾರ್ಡ್‌ಗೆ 30 ಮನೆ ಪ್ರತಿ ಮನೆಗೆ ರೂ.4.00 ಲಕ್ಷಗಳ ಹಾಗೆ ಅನುದಾನವನ್ನು ಹಂಚಿಕೆ ಮಾಡುವ ಬಗ್ಗೆ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

V. S Murthy
ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

2.3.5 ಕಂಡಿಕೆ 2.3.4 ರಲ್ಲಿ ಪ್ರಸ್ತಾಪಿಸಿರುವ ಅನುದಾನವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 32 ಪಿಎನ್‌ಜಿ 2015 ದಿನಾಂಕ:30–07–2015 ರಂತೆ ಶೇ.24.10%ರ ಅನುದಾನವನ್ನು ಪರಿಶಿಷ್ಟ ಜಾತಿಯವರಿಗೆ ಶೇ.17.15%ರಷ್ಟು ಹಾಗೂ ಪರಿಶಿಷ್ಟ ಪಂಗಡದವರಿಗೆ ಶೇ.6.95% ರಂತೆ ನಿಯಮಾನುಸಾರ ಮಾರ್ಗಸೂಚಿಯಂತೆ ಹಂಚಿಕೆ ಮಾಡಲು ಸೂಚಿಸಬಹುದು.

2.3.6 ಆಯವ್ಯಯ ಭಾಷಣ ಪುಸ್ತಕದಲ್ಲಿ ತಿಳಿಸಿರುವ ಹಾಗೆ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡಗಳ ಮತ್ತು ಆರ್ಥೀಕವಾಗಿ ದುರ್ಬಲ ವರ್ಗದವರಿಗೆ ಮನೆಗಳ ನಿರ್ಮಾಣ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮೆ॥ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತ ಸಂಸ್ಥೆಯ ತಂತ್ರಾಂಶವನ್ನು ಈ ಯೋಜನೆ ಪಾರದರ್ಶಕ ಅನುಷ್ಠಾನಕ್ಕಾಗಿ ಅಳವಡಿಸಿಕೊಳ್ಳುವ ಬಗ್ಗೆ.

2.3.7 <u>ಕಲ್ಯಾಣ ಕಾರ್ಯಕ್ರಮಗಳ ಲೆಕ್ಕಶೀರ್ಷಿಕೆ ಪಿ–0224ರಡಿ ಪೌರಕಾರ್ಮಿಕರ, ಗ್ಯಾಂಗ್‌ಮೆನ್‌ಗಳ ಮತ್ತು ಮಾಲೀಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲು ರೂ.500.00 ಲಕ್ಷಗಳ</u> ಅನುದಾನವನ್ನು ಕಲ್ಯಾಣ ಶೀರ್ಷಿಕೆಯಲ್ಲಿ ನಿಗಧಿ ಪಡಿಸಲಾಗಿದ್ದು, ಇದುವರೆಗೆ ಸದರಿ ಲೆಕ್ಕಶೀರ್ಷಿಕೆ/ಕಾರ್ಯಕ್ರಮ ಶಿಕ್ಷಣ ಇಲಾಖೆಯಿಂದ ಅನುಷ್ಟಾನಗೊಳಿಸಲಾಗುತ್ತಿದ್ದು ಯಶಸ್ವಿಯಾಗಿ ಅನುಷ್ಠಾನಗೊಂಡಿರದ ಕಾರಣ, ಸದರಿ ಕಾರ್ಯಕ್ರಮವನ್ನು ಪಾಲಿಕೆಯ ವಿದ್ಯಾಧಿಕಾರಿಗಳು / ಕಲ್ಯಾಣ ಶಾಖೆಯಿಂದ ಅನುಷ್ಠಾನಗೊಳಿಸುವ ಬಗ್ಗೆ

2.4 ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಚಾಲ್ತಿ ಕಲ್ಯಾಣ ಕಾರ್ಯಕ್ರಮಗಳಡಿ ಲೆಕ್ಕ ಶೀರ್ಷಿಕೆ ಪಿ–ಕೋಡ್–2975 ರಡಿ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಉನ್ನತ ವ್ಯಾಂಸಗಕ್ಕೆ ಸಹಾಯ ಧನ ಕಾರ್ಯಕ್ರಮವನ್ನು ಆಯವ್ಯಯ ಪುಸ್ತಕದಲ್ಲಿ ನಮೂದಿಸಲಾಗಿದ್ದು, 2016–17ನೇ ಸಾಲಿನಲ್ಲಿ ರೂ.500.00 ಲಕ್ಷಗಳ ಅನುದಾನ ನೀಡಿರುವುದರಿಂದ ಈ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಲು ಬಗ್ಗೆ.

2.5 2016–17ನೇ ಸಾಲಿನ ಆಯವ್ಯಯದಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತರ, ವಿಕಲಚೇತನರು, ಸಾಮಾನ್ಯ ವರ್ಗದವರಿಗೆ, ಮಹಿಳಾ ಕಲ್ಯಾಣ ಕಾರ್ಯಕ್ರಮ ಹಾಗೂ ಮಂಗಳ ಮುಖಿಯರ ಕಾರ್ಯಕ್ರಮ ಇತ್ಯಾದಿ, ವಿವಿಧ ಲೆಕ್ಕ ಶೀರ್ಷಿಕೆಯಡಿ ಒದಗಿಸಿರುವ ಅನುದಾನವನ್ನು ಒಟ್ಟು 198 ವಾರ್ಡ್‌ಗಳಿಗೆ ವಾರ್ಡ್‌ವಾರು ಸಮಾನಾಂತರವಾಗಿ ಹಂಚಿಕೆ ಮಾಡಬೇಕಾಗಿದ್ದು, ವಿವರ <u>ಅನುಬಂಧ–03ರಲ್ಲಿ ಲಗತ್ತಿಸಿದೆ.</u>

2.6.1 ಮುಂದುವರೆದು ಮಹಿಳಾ ಕಲ್ಯಾಣ ಕಾರ್ಯಕ್ರಮ ಲೆಕ್ಕ ಶೀರ್ಷಿಕೆ–1937 ರಡಿ ಬರುವ ಹೊಲಿಗೆ/ನಿಟ್ಟಿಂಗ್/ಎಂಬ್ರಾಯಿಡರಿ ತರಬೇತಿ ಯೋಜನೆಯಡಿ 203 ಗೌರವ ಧನ

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

54

(A)

ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು ಇವರಿಗೆ ಪ್ರಸ್ತುತ ನೀಡುತ್ತಿರುವ ಗೌರವಧನದನ್ವಯ, ಗೌರವಧನಕ್ಕಾಗಿಯೇ ವಾರ್ಷಿಕ ಅಂದಾಜು ರೂ.200.00 ಲಕ್ಷಗಳ ಅನುದಾನ ಮತ್ತು ಹೊಲಿಗೆ ತರಬೇತಿ ಕೇಂದ್ರಗಳಿಗೆ, ಹೊಲಿಗೆ ಯಂತ್ರಗಳು ಹಾಗೂ ಉಪಕರಣಗಳು, ತರಬೇತಿ ಸಾಮಗ್ರಿಗಳು, ಕಟ್ಟಡ ಬಾಡಿಗೆ, ಹೊಲಿಗೆ ಯಂತ್ರಗಳ ದುರಸ್ಥಿ, ಶಿಷ್ಯ ವೇತನ, ಇತ್ಯಾದಿ ಯೋಜನೆಗಳಿಗೆ ರೂ.300.00 ಲಕ್ಷಗಳು ಸೇರಿದಂತೆ ಒಟ್ಟಾರೆ ಸುಮಾರು ಕನಿಷ್ಟ ರೂ.500.00 ಲಕ್ಷಗಳ ಅವಶ್ಯಕತೆಯಿರುತ್ತದೆ. ಆದರೆ, ಈ ಲೆಕ್ಕಶೀರ್ಷಿಕೆಯಡಿ ಕೇವಲ ರೂ.1010.00 ಲಕ್ಷಗಳನ್ನು ಮಾತ್ರ ಒದಗಿಸಿದ್ದು. ಅನುದಾನದ ಕೊರತೆ ಬೀಳುತ್ತದೆ. ಕಾರಣ ಮೇಲ್ಕಂಡ ಉದ್ದೇಶಗಳಿಗೆ ಅನುದಾನವನ್ನು ಕಾದಿರಿಸಿ ಮಿಕ್ಕ ಅನುದಾನಕ್ಕೆ ಮಹಿಳಾ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು/ಅಳವಡಿಸಿಕೊಂಡು ಅನುಷ್ಠಾನ ಮಾಡುವ ಬಗ್ಗೆ ಪರಿಶೀಲಿಸಿ ಸೂಕ್ತ ನಿರ್ದೇಶನ ನೀಡಲು ಕೋರಲಾಗಿದೆ.

2.6.2 **<u>2016-17 ನೇ ಸಾಲಿನ ಭಾಷಣ ಮತ್ತು ಆಯವ್ಯಯ ಅಂದಾಜುಗಳ ಪುಸ್ತಕದಲ್ಲಿ ಮಹಿಳಾ ಸದಸ್ಯರ ವಾರ್ಡ್‌ಗಳಿಗೆ ತಲಾ ರೂ.10.00 ಲಕ್ಷಗಳೆಂದು ನಮೂದಿಸಿದ್ದು</u>** ಅದಕ್ಕೆ ತಕ್ಕಂತೆ ಸಾಕಷ್ಟು ಅನುದಾನ ಒದಗಿಸದಿರುವುದರಿಂದ ಇದನ್ನು ಕೈಬಿಟ್ಟು, ಆಯವ್ಯಯದಲ್ಲಿ ನಿಗಧಿಪಡಿಸಿರುವ ಅನುದಾನವನ್ನು ಎಲ್ಲಾ ವಾರ್ಡ್‌ಗಳಿಗೆ ಸಮಾನಂತರವಾಗಿ ಹಂಚಿಕೆ ಮಾಡವ ಬಗ್ಗೆ ಆದೇಶ ಕೋರಿದೆ.

2.6.3 **<u>ಬಿಬಿಎಂಪಿ ಶಾಲೆಯಲ್ಲಿನ ಹೆಣ್ಣು ಮಕ್ಕಳಿಗೆ ಸ್ವಚ್ಚತಾ ಕಿಟ್ ವಿತರಣೆ ಕಾರ್ಯಕ್ರಮ</u>** ಲೆಕ್ಕ ಶೀರ್ಷಿಕೆ-3047 ರಡಿ ರೂ.200.00 ಲಕ್ಷಗಳನ್ನು ನಮೂದಿಸಿದ್ದು, ಬಿ.ಬಿಎಂಪಿ ಶಾಲೆಗಳಿರುವ ವಲಯಗಳಿಗೆ ವಿಧ್ಯಾರ್ಥಿನಿಯರ ಸಂಖ್ಯೆಗೆ ಅನುಗುಣವಾಗಿ ಅನುಧಾನದ ಹಂಚಿಕೆ ಮಾಡಲು ಕೇಂದ್ರ ಕಛೇರಿಯಿಂದ ಕ್ರಮವಹಿಸುವ ಬಗ್ಗೆ ಆದೇಶ ಕೋರಿದೆ.

2.6.4 **<u>ಮಂಗಳ ಮುಖಿ/ಟ್ರಾನ್ಸ್ ಜೆಂಡರ್‌ಗಳಿಗೆ ವೃತ್ತಿ ತರಬೇತಿ ಹಾಗೂ ಆರ್ಥಿಕ ಸಹಾಯ ಕಾರ್ಯಕ್ರಮ</u>** ಲೆಕ್ಕ ಶೀರ್ಷಿಕೆ-3133 ರಡಿ ರೂ.200.00 ಲಕ್ಷಗಳನ್ನು ನಮೂದಿಸಿದ್ದು, ಪೂಜ್ಯ ಮಹಾಪೌರರ ಹಾಗು ಸಾ.ನ್ಯಾ.ಸ್ಥಾ.ಸಮಿತಿಯ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಂಗಳ ಮುಖಿ ಸಂಘಟನೆಯವರು ಕೋರಿರುವ ಹಾಗೆ ಹಮ್ಮಿಕೋಳ್ಳಲಾಗುವ ಕಾರ್ಯಕ್ರಮಗಳಿಗೆ ಸ್ವಿಕರಿಸಲಾಗುವ ಅರ್ಜಿಗಳ ಆಧಾರದಮೇಲೆ ಕೇಂದ್ರ ಕಛೇರಿಯಿಂದ ಅನುಧಾನದ ಹಂಚಿಕೆ/ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು.

2.6.5 **<u>ರಾತ್ರಿ ತಂಗುದಾಣಗಳ ನಿರ್ಮಾಣ ಕಾರ್ಯಕ್ರಮ</u>** ಲೆಕ್ಕ ಶೀರ್ಷಿಕೆ-2583 ರಡಿ ರೂ.200.00 ಲಕ್ಷಗಳನ್ನು ನಿಗಧಿಪಡಿಸಿರುವುದರಿಂದ ಎಲ್ಲಾ ವಲಯಗಳಿಗೆ ಸಮನಾಂತರವಾಗಿ ಪ್ರತಿ ವಲಯಕ್ಕೆ ರೂ.25.00 ಲಕ್ಷಗಳಂತೆ ಹಂಚಿಕೆ ಮಾಡಬೇಕಾಗಿರುತ್ತದೆ.

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

Bangalore-32

2.7.1 ಆಯವ್ಯಯ ಭಾಷಣ ಮತ್ತು ಆಯವ್ಯಯ ಅಂದಾಜು ಪುಸ್ತಕದಲ್ಲಿ ನಮೂದಿಸಿರುವ ಹಾಗೆ (ಅ) ಪ.ಜಾ/ಪ.ಪಂಗಡಗಳ ಫಲಾನುಭವಿಗಳಿಗೆ ಪ್ರತಿ ವಾರ್ಡ್‌ಗೆ 30 ಮನೆಗಳು, (ಆ) ಹಿಂದುಳಿದ ವರ್ಗಾಗಳ/ಅಲ್ಪ ಸಂಖ್ಯಾತ/ಆರ್ಥಿಕ ಹಿಂದುಳಿದ ವರ್ಗಾದವರಿಗೆ 15 ಮನೆಗಳ ನಿರ್ಮಾಣ, ಮತ್ತು

i. ಯಶವಂತಪುರ ಹಿಂದುಳಿದ ವರ್ಗಾಗಳ/ಅಲ್ಪ ಸಂಖ್ಯಾತ/ಆರ್ಥಿಕ ಹಿಂದುಳಿದ ವರ್ಗಾದವರಿಗೆ 550 ವೈಯುಕ್ತಿಕ ಮನೆ ನಿರ್ಮಾಣ,

ii. ಶಂಕರಮಠ ಹಿಂದುಳಿದ ವರ್ಗಾಗಳ/ಅಲ್ಪ ಸಂಖ್ಯಾತ/ಆರ್ಥಿಕ ಹಿಂದುಳಿದ ವರ್ಗಾದವರಿಗೆ 25 ವೈಯುಕ್ತಿಕ ಮನೆ ನಿರ್ಮಾಣ ಮತ್ತು

iii. ಬಿ.ಟಿ.ಎಂ ಬಡಾವಣೆ ಹಿಂದುಳಿದ ವರ್ಗಾಗಳ/ಅಲ್ಪ ಸಂಖ್ಯಾತ/ಆರ್ಥಿಕ ಹಿಂದುಳಿದ ವರ್ಗಾದವರಿಗೆ 125 ವೈಯುಕ್ತಿಕ ಮನೆ ನಿರ್ಮಾಣಕ್ಕೆ

2016-17ನೇ ಸಾಲಿನ ಮನೆ ನಿರ್ಮಾನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪಿ-2021 ಮತ್ತು ಪಿ-2340 ಚಾಲ್ತಿ ಕಾರ್ಯಕ್ರಮಗಳ ವಲಯವಾರು ಅನುದಾನ ಹಂಚಿಕೆ ವಿವರ ಅನುಬಂಧ-04ರಲ್ಲಿ ಲಗತ್ತಿಸಿದೆ.

2.8 ಪಾಲಿಕೆ ವ್ಯಾಪ್ತಿಯಲ್ಲಿನ ನಗರ ಸಭೆ/ಪುರ ಸಭೆ ಪ್ರದೇಶದಲ್ಲಿನ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ:-

ಪಾಲಿಕೆ ವ್ಯಾಪ್ತಿಯಲ್ಲಿನ ನಗರ ಸಭೆ/ಪುರ ಸಭೆ ಪ್ರದೇಶದಲ್ಲಿನ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆಂದು ಲೆಕ್ಕಶಿರ್ಷಿಕೆ ಪಿ-3071ರಡಿ ರೂ. 200.00 ಲಕ್ಷಗಳ ಅನುಧಾನವನ್ನು ನಿಗದಿಪಡಿಸಿದ್ದು, ಹೊಸ 5 ವಲಯಗಳಾದ ಬೊಮ್ಮನಹಳ್ಳಿ-16 ವಾರ್ಡ್, ಮಹದೇವಪುರ-17 ವಾರ್ಡ್, ಯಲಹಂಕ-11 ವಾರ್ಡ್, ದಾಸರಹಳ್ಳಿ-8 ವಾರ್ಡ್, ರಾಜರಾಜೇಶ್ವರಿ ನಗರ-14 ವಾರ್ಡ್‌ಗಳು ಒಟ್ಟು 66 ವಾರ್ಡ್‌ಇದ್ದು ಸಮನಾಂತರವಾಗಿ ಹಂಚಿಕೆ ಮಾಡಬೇಕಾಗಿದ್ದು ಅನುಬಂಧ-05 ರಲ್ಲಿ ಲಗತ್ತಿಸಿದೆ. ಸದರಿ ಅನುದಾನಕ್ಕೆ ವಿಶೇಷ ಆಯುಕ್ತರು(ಯೋಜನೆ) ರವರು ಪ್ರಧಾನ ಅಭಿಯಂತರರು ಕಾಮಗಾರಿ ವಿಭಾಗದಿಂದ ವಾರ್ಡ್‌ವಾರು ಪ್ರಸ್ತಾವನೆಗಳನ್ನು ಒಳಗೊಂಡ ವಲಯ ಕಾಮಗಾರಿ ಕ್ರಿಯಾಯೋಜನೆಯನ್ನು ಸಿದ್ದಪಡಿಸಿ ನಿಯಮಾನುಸಾರ ಮಾರ್ಗಸೂಚಿಗಳನ್ವಯ ಎಲ್ಲಾ ರೀತಿಯ ಕ್ರಮ ಕೈಗೊಂಡು ಸಾ.ನ್ಯ.ಸ್ಥಾ.ಸಮಿತಿಯ ಅನುಮೋದನೆ ಪಡೆದು ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು.

2.9 ಪಾಲಿಕೆ ವತಿಯಿಂದ ಕೊಳಚೆ ನಿರ್ಮೂಲನಾ ಮಂಡಳಿಗೆ ವೈಯುಕ್ತಿಕ ಮನೆ ನಿರ್ಮಾಣಕ್ಕಾಗಿ ಹೊಂದಾಣಿಕೆ ಮೊತ್ತ

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

53

(5)

ಈ ಮೇಲ್ಕಂಡ ಯೋಜನೆಯು "ನಗರ ಪ್ರದೇಶದಲ್ಲಿನ ಕಡು ಬಡವರಿಗೆ ಮೂಲಭೂತ ಸೌಕರ್ಯಗಳ" ಕಾರ್ಯಕ್ರಮ ಈ ಹಿಂದಿನ ಸಾಲಿನ ಆಯವ್ಯಯ ಪುಸ್ತಕಗಳಲ್ಲಿ ಜೆ.ಎನ್.ಎನ್.ಯು.ಆರ್.ಎಂ.ಕಾಮಗಾರಿಗಳು ವಿಭಾಗ ರವರಿಗೆ ನಮೂದಿಸಲಾಗಿತ್ತು. 2016–17ನೇ ಸಾಲಿನ ಆಯವ್ಯಯ ಪುಸ್ತಕದಲ್ಲಿ ಹೊಸದಾಗಿ ಸೇರಿಸಿರುವ ಪಿ–ಕೋಡ್ 3149 ರಡಿಯಲ್ಲಿ ರೂ.5000.00 ಲಕ್ಷಗಳು ಅನುಧಾನವನ್ನು ಪಾಲಿಕೆ ವತಿಯಿಂದ ಕೊಳಚೆ ನಿರ್ಮೂಲನಾ ಮಂಡಳಿಗೆ ವೈಯುಕ್ತಿಕ ಮನೆ ನಿರ್ಮಾಣಕ್ಕಾಗಿ ಹೊಂದಾಣಿಕೆ ಮೊತ್ತ ಅನುದಾನವನ್ನು ಕಲ್ಯಾಣ ಕಾರ್ಯಕ್ರಮಗಳಡಿ ನಮೂದಿಸಿರುವದರಿಂದ ಸದರಿ ಕಾರ್ಯಕ್ರಮವನ್ನು **ಜೆ.ಎನ್.ಎನ್.ಯು.ಆರ್.ಎಂ. ನಿಯಮಾನುಸಾರ ಈ ಕಾರ್ಯಕ್ರಮಕ್ಕೆ ರೂಪುರೇಷೆಗಳನ್ನು ಮತ್ತು ಮಾರ್ಗಸೂಚಿ ಹಾಗೂ ಅನುದಾನ ಹಂಚಿಕೆ ಮತ್ತು ಕಾರ್ಯಕ್ರಮದ ಅನುಷ್ಟಾನದ ಬಗ್ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ** ಬಿಎಸ್‌ಯುಪಿ/ಕಾಮಗಾರಿ ವಿಭಾಗದವರು ಪ್ರಧಾನ ಅಭಿಯಂತರರು ಮತ್ತು ವಿಶೇಷ ಆಯುಕ್ತರು (ಯೋಜನೆ) ರವರ ಮುಕಾಂತರ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು. ಅನುಧಾನದ ವಿವರಗಳನ್ನು ಅನುಬಂಧ–05 ರಲ್ಲಿ ಲಗತ್ತಿಸಿದೆ.

2.10 2016–17ನೇ ಸಾಲಿನ ಆಯವ್ಯಯದಲ್ಲಿನ ಲೆಕ್ಕ ಶೀರ್ಷಿಕೆ ಪಿ 1878, ಪಿ 2021, ಪಿ 2340, & ಪಿ 3157, ಪಿ 3160, ಪಿ 3161, ಪಿ 3149 ಮತ್ತು ಪಿ 3071 ಗಳಡಿಯಲ್ಲಿ ನಿಗಧಿಪಡಿಸಿರುವ ಚಾಲ್ತಿ ಅನುದಾನಕ್ಕೆ ಸಂಬಂಧಿಸಿದಂತೆ ವಿಶೇಷ ಆಯುಕ್ತರು(ಯೋಜನೆ)ರವರು ಪ್ರಧಾನ ಅಭಿಯಂತರರು ಕಾಮಗಾರಿ ವಿಭಾಗದಿಂದ ವಾರ್ಡ್‌ವಾರು ಪ್ರಸ್ತಾವನೆಗಳನ್ನು ಒಳಗೊಂಡ ವಲಯ ಕಾಮಗಾರಿ ಕ್ರಿಯಾಯೋಜನೆಯನ್ನು ಸಿದ್ದಪಡಿಸಿ ನಿಯಮಾನುಸಾರ ಮಾರ್ಗಸೂಚಿಗಳನ್ವಯ ಎಲ್ಲಾ ರೀತಿಯ ಕ್ರಮ ಕೈಗೊಂಡು ಸಾ.ನ್ಯ.ಸ್ಥಾ.ಸಮಿತಿಯ ಅನುಮೋದನೆ ಪಡೆದು ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು.

2.11 ಈ ಮೇಲ್ಕಂಡಂತೆ 2016–17ನೇ ಸಾಲಿನ ಆಯವ್ಯಯದ ಅಂದಾಜಿನಲ್ಲಿ ಚಾಲ್ತಿ ಕಲ್ಯಾಣ ಕಾರ್ಯಕ್ರಮಗಳ ವಿವಿಧ ಲೆಕ್ಕಶೀರ್ಷಿಕೆಯಡಿ ಲಭ್ಯವಾಗುವ ಅನುದಾನಕ್ಕೆ ಅನುಗುಣವಾಗಿ ವಲಯ ಮಟ್ಟದಲ್ಲಿ ಅನುಮೋದಿತ ವರ್ಗ, ಕಾರ್ಯಕ್ರಮ ಹಾಗು ವಾರ್ಡ್‌ವಾರು ಆರ್ಥಿಕ ಮತ್ತು ಭೌತಿಕ ಗುರಿಯನ್ನು ನಿಗಧಿಪಡಿಸಿಕೊಂಡು ಆಯಾ ವಲಯ ವಾರ್ಡ್‌ವಾರು ಕ್ರಿಯಾಯೋಜನೆಗೆ ಜಾರಿಯಲ್ಲಿರುವ ಅಧಿಕಾರಪ್ರತ್ಯಾಯೋಜನೆಯನ್ವಯ ಸಕ್ಷಮಪ್ರಾಧಿಕಾರದ ಅನುಮೋದನೆ ಪಡೆಯುವುದು.

2.12 2016–17ನೇ ಸಾಲಿನ ವಿವಿಧ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಅನುಷ್ಟಾನಾಧಿಕಾರಿಗಳು ಸಾರ್ವಜನಿಕ ಪತ್ರಿಕಾ ಪ್ರಕಟಣೆ ಮುಖಾಂತರ ಅರ್ಜಿ ಆಹ್ವಾನಿಸಿ ಅರ್ಜಿಗಳನ್ನು ವಿತರಿಸುವುದು, ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ, ವಿವಿಧ ಯೋಜನೆಗಳಿಗೆ

V. [illegible]
ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದು ಇತ್ಯಾದಿ ಕ್ರಮಗಳನ್ನು ನಿಯಮಾನುಸಾರ ಪೂರ್ಣಗೊಳಿಸಿ ಪ್ರಸ್ತಾವನೆಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಪ್ರಸಕ್ತ ಸಾಲಿನ ಆರ್ಥಿಕ ವರ್ಷದ ಒಳಗಾಗಿ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲು ವಲಯ ಅಪರ/ಜಂಟಿ ಆಯುಕ್ತರು ರವರಿಗೆ ಆದೇಶಿಸಬೇಕಾಗಿರುತ್ತದೆ.

2.13 2016–17ನೇ ಸಾಲಿನ ಚಾಲ್ತಿ ಆಯವ್ಯಯದಲ್ಲಿನ ಅವಕಾಶಗಳ ಬಗ್ಗೆ ಪರಿಶೀಲಿಸಿ 2016–17ನೇ ಸಾಲಿಗೆ ತೆಗೆದುಕೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಮಾನ್ಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ನಿರ್ದೇಶನ/ಅನುಮೋದನೆ ನೀಡಲು ಕೋರಲಾಗಿದೆ. ಈ ನಿಟ್ಟಿನಲ್ಲಿ ಅಳವಡಿಸಿಕೊಳ್ಳಬಹುದಾದ ವಿವಿಧ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ನಗರಾಢಳಿತ ಇಲಾಖೆ ರವರ ಸುತ್ತೋಲೆ (ಅ) ಸಂಖ್ಯೆ:ನಅಇ/37/ಪಿಎನ್‌ಜಿ/2015 ದಿನಾಂಕ:30/07/2015, (ಆ) ಸಂಖ್ಯೆ:ನಅಇ/43/ಪಿಎನ್‌ಜಿ/2015 ದಿನಾಂಕ:29/03/2016, (ಇ) ಸಂಖ್ಯೆ:ನಅಇ/39/ಪಿಎನ್‌ಜಿ/2015 ದಿನಾಂಕ:09/10/2015 ರ ಪ್ರತಿಗಳನ್ನು ಅವಗಾಹನೆಗಾಗಿ ಲಗತ್ತಿಸಲಾಗಿದೆ.

2.14 ಪಾಲಿಕೆಯ ನೈರ್ಮಲ್ಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ, ಇತರೆ ಬಡಜನರು, ವಿಕಲಚೇತನರು ಪೌರಕಾರ್ಮಿಕರುಗಳಿಗೆ (ಖಾಯಂ ಹಾಗೂ ಹೊರಗುತ್ತಿಗೆ ಮೇರೆಗೆ ಕಾರ್ಯನಿರ್ವಹಿಸುವವರು) ಆದ್ಯತೆ ನೀಡುವುದು.

3.1 ವಿವಿಧ ಲೆಕ್ಕ ಶೀರ್ಷಿಕೆಗಳಡಿ ನಿಗಧಿಪಡಿಸಿರುವ ಅನುಧಾನವನ್ನು ಅದೇ ಉದ್ದೇಶಗಳಿಗೆ ವೆಚ್ಚಮಾಡತಕ್ಕದ್ದು, ಒಂದು ವೇಳೆ ಅನುಧಾನದ ಮರುಹೊಂದಾಣಿಕೆ ಮಾಡಿಕೊಳ್ಳಬೇಕಾದ್ದಲ್ಲಿ, ಒಂದೇ ಲೆಕ್ಕಶಿರ್ಷಿಕೆಯಡಿಯಲ್ಲಿ ಬರುವಂತಹ ವಿವಿಧ ಕಾರ್ಯಕ್ರಮಗಳ ಪೈಕಿ, ಯಾವುದಾದರು ಕಾರ್ಯಕ್ರಮಕ್ಕೆ ಮೀಸಲಿಟ್ಟಿರುವ ಅನುದಾನ ಬಳಕೆಯಾಗದೆ ಉಳಿಕೆಯಾದ ಪಕ್ಷದಲ್ಲಿ, ಅಂತಹ ಅನುದಾನವನ್ನು ಸದರಿ ಲೆಕ್ಕಶೀರ್ಷಿಕೆಯಡಿ ಬರುವಂತಹ ಯಾವುದಾದರೂ ಹೆಚ್ಚು ಬೇಡಿಕೆಯಿರುವ ಕಾರ್ಯಕ್ರಮಕ್ಕೆ ಮರುಹೊಂದಾಣಿಕೆ ಮಾಡಿಕೊಳ್ಳವ ಪ್ರಸ್ತಾವನೆಗೆ ಮಾನ್ಯ ಆಯುಕ್ತರು ಅನುಮೋದನೆ ನೀಡುವ ಬಗ್ಗೆ.

3.2 ಒಂದು ಲೆಕ್ಕಶೀರ್ಷಿಕೆಯಿಂದ ಇನ್ನೊಂದು ಲೆಕ್ಕಶಿರ್ಷಿಕೆಯಲ್ಲಿನ ಕಲ್ಯಾಣ ಕಾರ್ಯಕ್ರಮ/ಯೋಜನೆಗಳಿಗೆ ಮರುಹೊಂದಾಣಿಕೆ ಮಾಡಿಕೊಳ್ಳುವ ಸಂದರ್ಭ ಬಂದಲ್ಲಿ ಮಾತ್ರ ಅಂತಹ ಮರು ಹೊಂದಾಣಿಕೆಗೆ ಪ್ರಸ್ತಾವನೆಗಳನ್ನು ಮಾನ್ಯ ಆಯುಕ್ತರ

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

52
(6)

ಅನುಮೋದನೆಯೊಂದಿಗೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳಿಗೆ ಅನುಮೋದನೆ ಪಡೆದು, ಅನುಷ್ಠಾನಗೊಳಿಸಲು ಕ್ರಮವಹಿಸುವುದು.

3.3 ಕಲ್ಯಾಣ ಕಾರ್ಯಕ್ರಮಗಳು ಶೀಘ್ರ ಅನುಷ್ಠಾನಗೊಳಿಸುವ ಉದ್ದೇಶದಿಂದ ಟೆಂಡರ್ ರಹಿತ ಕಲ್ಯಾಣ ಕಾರ್ಯಕ್ರಮಗಳನ್ನು ಮಾರ್ಗಸೂಚಿಯನ್ವಯ ನಿಯಮಾಸಾರ ಹಾಗೂ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯನ್ವಯ ಅನುಷ್ಠಾನಾಧಿಕಾರಿಗಳು ವಲಯ ಮಟ್ಟದಲ್ಲಿ ಕ್ರಮವಹಿಸುವುದು.

3.4 ಕಲ್ಯಾಣ ಕಾರ್ಯಕ್ರಮಗಳು ಹಾಗೂ ಶೇ.24.10 ರಡಿಯ ಕಾಮಗಾರಿಗಳನ್ನು ಶೀಘ್ರಗತಿಯಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ವಲಯದ ಆಯುಕ್ತರುಗಳನ್ನು ಅನುಷ್ಠಾನಾಧಿಕಾರಿಗಳಾಗಿ ಹಾಗೂ ಉಪ ಆಯುಕ್ತರುಗಳನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸುವ ಬಗ್ಗೆ.

3.5 ಶೇ.24.10ರ ಅನುದಾನದಡಿಯಲ್ಲಿನ ಮನೆ ನಿರ್ಮಾಣ ಮತ್ತು ಮೂಲಭೂತ ಸೌಕರ್ಯ ಹಾಗೂ ಇತ್ಯಾದಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವಲಯದ ಮುಖ್ಯ ಅಭಿಯಂತರರನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸುವ ಬಗ್ಗೆ ಮತ್ತು ಕೇಂದ್ರ ಕಛೇರಿಯಲ್ಲಿ ಪ್ರಧಾನ ಅಭಿಯಂತರರು ಎಲ್ಲಾ ರೀತಿಯ ಕ್ರಮ ವಹಿಸುವುದು.

3.6 ಪ್ರತಿ ತಿಂಗಳು ವಲಯವಾರು ಪ್ರಗತಿಯ ಮಾಹಿತಿಯನ್ನು ನಿಗಧಿತ ನಮೂನೆಗಳಲ್ಲಿ ವಲಯ ವ್ಯಾಪ್ತಿಯಲ್ಲಿ ಕಲ್ಯಾಣ ಕಾರ್ಯಕ್ರಮಗಳ ಮತ್ತು ಕಾಮಗಾರಿ ಒಟ್ಟಾರೆ ಪ್ರಗತಿ ವರದಿಯನ್ನು ಕ್ರೋಢಿಕರಿಸಿ ತಪ್ಪದೇ ಕೇಂದ್ರ ಕಛೇರಿಗೆ ಸಲ್ಲಿಸುವುದು ಹಾಗೂ ಪ್ರತಿ ಸಭೆಗೆ ಅಗತ್ಯ ಮಾಹಿತಿಯೊಂದಿಗೆ ಹಾಜರಾಗಲು ಸಹ ಸೂಚಿಸಿದೆ.

3.7 ತತ್ಸಂಬಂಧವಾಗಿ ಮೇಲೆ ವಿವರಿಸಲಾದ (ಕಂಡಿಕೆ ಸಂಖ್ಯೆ 2 & 3) ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, (a) 2016–17ನೇ ಸಾಲಿನ ಶೇ.24.10% ರ ಅನುದಾನದಡಿಯ ಪ.ಜಾ/ಪ.ಪ ಕಲ್ಯಾಣ ಕಾರ್ಯಕ್ರಮಗಳು/ ಕಾಮಗಾರಿಗಳು/ವಸತಿ ನಿರ್ಮಾಣ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದ ಕಲ್ಯಾಣ ಕಾರ್ಯಕ್ರಮಗಳು/ವಸತಿ ನಿರ್ಮಾಣ/ಕಾಮಗಾರಿಗಳು ಮಹಿಳಾ ಕಲ್ಯಾಣ ಕಾರ್ಯಕ್ರಮಗಳು ಹಾಗೂ ವಿಕಲಚೇತನರು, ಮಂಗಳ ಮುಖಿಯರು ಮತ್ತು ಸಾಮಾನ್ಯ ವರ್ಗದವರ ಅನುದಾನದಡಿ ಅನುಷ್ಠಾನಗೊಳಿಸಬೇಕಾದ ಕಲ್ಯಾಣ ಕಾರ್ಯಕ್ರಮಗಳನ್ನು ಹಾಗೂ ಕಾಮಗಾರಿಗಳ ಅನುದಾನದ ಮರು ಹಂಚಿಕೆ ಮತ್ತು ಕ್ರಿಯಾಯೋಜನೆಯನ್ನು ಅನುಮೋದಿಸಲು ಮತ್ತು (b) ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಹಮ್ಮಿಕೊಳ್ಳಬೇಕಾದ

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಲ್ಯಾಣ ಕಾರ್ಯಕ್ರಮಗಳು/ಯೋಜನೆಗಳನ್ನು ಸೂಚಿಸಲು ಕೋರಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ತೀರ್ಮಾನ:

ವಿಶೇಷ ಆಯುಕ್ತರು (ಕಲ್ಯಾಣ)ರವರ ದಿನಾಂಕ 04-08-2016ರ ಟಿಪ್ಪಣಿಯನ್ನು ಭಾಗಶಃ ಒಪ್ಪುತ್ತಾ, ಈ ಕೆಳಕಂಡ ಮಾರ್ಪಾಡುಗಳೊಂದಿಗೆ 2016-17ನೇ ಸಾಲಿನ ಆಯವ್ಯಯದ ಅನುದಾನ ಹಂಚಿಕೆ ಮತ್ತು ಕ್ರಿಯಾಯೋಜನೆಯ ಕುರಿತು ಅನುಮೋದಿಸಲು ಸಮಿತಿಯು ತೀರ್ಮಾನಿಸಿತು.

1. **ಅ.** 2016-17ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳಿಗೆ ಅನುಮೋದಿತ ಆಯವ್ಯಯ ಅಂದಾಜುಗಳಿಗೆ ಸಂಬಂಧಿತ ಕ್ರಿಯಾಯೋಜನೆಯಲ್ಲಿ ನಿಗಧಿಪಡಿಸಿರುವಂತೆ ಲೆಕ್ಕಶೀರ್ಷಿಕೆ ಪಿ-2020, ಪಿ-2022, ಮತ್ತು ಪಿ-2652 ಅಡಿಯಲ್ಲಿ ಲಭ್ಯವಿರುವ ಅನುದಾನವನ್ನು ವಾರ್ಡ್‌ವಾರು ಪರಿಶಿಷ್ಟ ಜಾತಿ/ಪಂಗಡ ವರ್ಗದವರ ಜನಸಂಖ್ಯೆ ಆಧಾರದ ಮೇಲೆ ಹಂಚಿಕೆ ಮಾಡಲಾಗಿದೆ.

ಆ. ಮುಂದುವರೆದಂತೆ, ಪಿ-2023ರಡಿಯಲ್ಲಿ ಮೀಸಲಿರಿಸಿರುವ ಒಟ್ಟು ರೂ. 25.00 ಕೋಟಿ ಅನುದಾನದಲ್ಲಿ ವಾರ್ಡ್ ಸಂಖ್ಯೆ 60-ಸಗಾಯಪುರ ವ್ಯಾಪ್ತಿಯ ಪೌರಕಾರ್ಮಿಕರು, ಗ್ಯಾಂಗ್‌ಮೆನ್ ಹಾಗೂ ಮಾಲಿಗಳ ಕಾಲೋನಿಗಳ ಅಭಿವೃದ್ಧಿ ರೂ.2.00 ಕೋಟಿಗಳನ್ನು ಹಾಗೂ 61-ಎಸ್.ಕೆ.ಗಾರ್ಡನ್, 62-ರಾಮಸ್ವಾಮಿಪಾಳ್ಯ, 80-ಹೊಯ್ಸಳನಗರ, 92-ಶಿವಾಜಿನಗರ ಮತ್ತು 48-ಮುನೇಶ್ವರನಗರ ವಾರ್ಡ್‌ಗಳಲ್ಲಿರುವ ಪೌರಕಾರ್ಮಿಕರು, ಗ್ಯಾಂಗ್‌ಮೆನ್ ಹಾಗೂ ಮಾಲಿಗಳ ಕಾಲೋನಿಗಳ ಅಭಿವೃದ್ಧಿಗಾಗಿ ತಲಾ ರೂ.1.00 ಕೋಟಿಯಂತೆ ಒಟ್ಟಾರೆಯಾಗಿ ರೂ.7.00 ಕೋಟಿಗಳ ಅನುದಾನವನ್ನು ಮೀಸಲಿರಿಸಿ, ಮಾಹಿತಿ ಶಿಕ್ಷಣ ಹಾಗೂ ಸಂಪರ್ಕ ಕಾರ್ಯಕ್ರಮಗಳಿಗೆ ರೂ.2.00 ಕೋಟಿಗಳನ್ನು ಹಾಗೂ ಈ ಹಿಂದಿನ ವಕೀಲರಿಗೆ ಕಾನೂನು ಪುಸ್ತಕ ವಿತರಿಸುವ ಯೋಜನೆಯಡಿಯಲ್ಲಿ ಅರ್ಹ ಫಲಾನುಭವಿಗಳಿಗೆ ಈ ಲೆಕ್ಕ ಶೀರ್ಷಿಕೆಯಡಿಯಲ್ಲಿ ಅನುದಾನವನ್ನು ಮೀಸಲಿರಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಮತ್ತು ಪಿ-2023ರಲ್ಲಿರುವ ಉಳಿಕೆ ಅನುದಾನವನ್ನು 198 ವಾರ್ಡ್‌ಗಳ ಜನಸಂಖ್ಯೆ ಆಧಾರದ ಮೇಲೆ ಅನುದಾನ ಹಂಚಿಕೆ ಮಾಡಲು ತೀರ್ಮಾನಿಸಲಾಯಿತು.

ಇ. ಲೆಕ್ಕಶೀರ್ಷಿಕೆ ಪಿ-1936 ರಡಿಯಲ್ಲಿ ಮೀಸಲಿರಿಸಿರುವ ಒಟ್ಟು ರೂ. 10.00 ಕೋಟಿ ಅನುದಾನದಲ್ಲಿ ಮಾಹಿತಿ ಶಿಕ್ಷಣ ಹಾಗೂ ಸಂಪರ್ಕ ಕಾರ್ಯಕ್ರಮಗಳಿಗೆ ರೂ.2.00

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

51

ಕೋಟಿಗಳನ್ನು ಮೀಸಲಿರಿಸಿ, ಪಿ–1936ರಲ್ಲಿರುವ ಉಳಿಕೆ ಅನುದಾನ ರೂ.8.00 ಕೋಟಿಗಳನ್ನು 198 ವಾರ್ಡ್‌ಗಳಿಗೆ ಸಮನಾಗಿ ಹಂಚಿಕೆ ಮಾಡಲು ತೀರ್ಮಾನಿಸಲಾಯಿತು.

ಈ. ಲೆಕ್ಕಶೀರ್ಷಿಕೆ ಪಿ–1936 ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು ಕಾರ್ಯಕ್ರಮಗಳು ಅಡಿಯಲ್ಲಿ ವಾಹನ ಚಾಲನಾ ತರಭೇತಿ ಕಾರ್ಯಕ್ರಮವನ್ನು ಅನುಮೋದಿಸಲಾಗಿದ್ದು, ಈ ಲೆಕ್ಕ ಶೀರ್ಷಿಕೆಯಡಿಯಲ್ಲಿ ಲಭ್ಯ ಅನುದಾನಕ್ಕೆ ಮಿಕ್ಕ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಮಾನ್ಯ ಆಯುಕ್ತರ ಅನುಮೋದನೆಯೊಂದಿಗೆ ನಿಯಮಾನುಸಾರ ಅಳವಡಿಸಿಕೊಳ್ಳಲು ತೀರ್ಮಾನಿಸಲಾಯಿತು.

ಉ. ಲೆಕ್ಕಶೀರ್ಷಿಕೆ ಪಿ–2022 ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು(ವ್ಯಕ್ತಿಗತ ಸೌಲಭ್ಯ) ಅಡಿಯಲ್ಲಿ ವಾಹನ ಚಾಲನಾ ತರಭೇತಿ ಕಾರ್ಯಕ್ರಮವನ್ನು ಅನುಮೋದಿಸಲಾಗಿದ್ದು, ಈ ಲೆಕ್ಕ ಶೀರ್ಷಿಕೆಯಡಿಯಲ್ಲಿ ಲಭ್ಯ ಅನುದಾನಕ್ಕೆ ಮಿಕ್ಕ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಮಾನ್ಯ ಆಯುಕ್ತರ ಅನುಮೋದನೆಯೊಂದಿಗೆ ನಿಯಮಾನುಸಾರ ಅಳವಡಿಸಿಕೊಳ್ಳಲು ತೀರ್ಮಾನಿಸಲಾಯಿತು.

2. ಲೆಕ್ಕಶೀರ್ಷಿಕೆ ಪಿ–1878 ಮೂಲಭೂತ ಸೌಕರ್ಯಗಳು (ಸಮುದಾಯ ಕಾರ್ಯಕ್ರಮಗಳು) ಗಳಿಗೆ ಸಂಬಂಧಿಸಿದಂತೆ ರೂ. 2000.00 ಲಕ್ಷಗಳ ಅನುದಾನವನ್ನು ಈ ಕೆಳಗಿನ ವಾರ್ಡ್‌ಗಳಿಗೆ ಹಂಚಿಕೆ ಮಾಡಿ ಕೂಡಲೇ ಜಾಬ್ ಸಂಖ್ಯೆ ನೀಡಲು ಸಮಿತಿಯು ತೀರ್ಮಾನಿಸಿತು.

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ವಾರ್ಡ್ ಸಂಖ್ಯೆ ಮತ್ತು ಹೆಸರು	ಹಂಚಿಕೆ ಮಾಡಲಾದ ಅನುದಾನದ ಮೊತ್ತ
01	60 – ಸಗಾಯಪುರ	300.00
02	26 - ರಾಮಮೂರ್ತಿನಗರ	100.00
03	194 – ಗೊಟ್ಟಿಗೆರೆ	200.00
04	137 – ರಾಯಪುರ	100.00
05	36 – ಮತ್ತಿಕೆರೆ	100.00
06	108 – ಶ್ರೀರಾಮಮಂದಿರ	100.00
07	74 – ಶಕ್ತಿಗಣಪತಿನಗರ	100.00
08	40 – ದೊಡ್ಡಬಿದರಕಲ್ಲು	100.00
09	62 – ರಾಮಸ್ವಾಮಿಪಾಳ್ಯ	150.00
10	06 – ಥಣಿಸಂದ್ರ	150.00
11	61 – ಎಸ್.ಕೆ. ಗಾರ್ಡನ್	150.00
12	07 – ಬ್ಯಾಟರಾಯನಪುರ	50.00

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

13	08 – ಕೊಡಿಗೇಹಳ್ಳಿ	50.00
14	11 – ಕುವೆಂಪುನಗರ	50.00
15	14 – ಬಗಲಗುಂಟೆ	50.00
16	13 – ಮಲ್ಲಸಂದ್ರ	50.00
17	92 – ಶಿವಾಜಿನಗರ	50.00
18	195 – ಕೋಣನಕುಂಟೆ	50.00
19	198 – ಹೆಮ್ಮಿಗೆಪುರ	50.00
20	168 – ಪಟ್ಟಾಭಿರಾಮನಗರ	50.00
	ಒಟ್ಟು	**2000.00**

ಮುಂದುವರೆದು ಈ ಮೇಲ್ಕಂಡ 20 ವಾರ್ಡ್‌ಗಳಲ್ಲಿ ಲೆಕ್ಕಶೀರ್ಷಿಕೆ ಪಿ–1878 ಮೂಲಭೂತ ಸೌಕರ್ಯಗಳು (ಸಮುದಾಯ ಕಾರ್ಯಕ್ರಮಗಳು) ಅನುದಾನದಡಿಯಲ್ಲಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ ಸರ್ಕಾರದ ಅಂಗಸಂಸ್ಥೆಯಾದ ಮೆ॥ ಕೆ.ಆರ್.ಐ.ಡಿ.ಎಲ್. ಮುಖಾಂತರ ಕೈಗೊಳ್ಳಲು ತೀರ್ಮಾನಿಸಲಾಯಿತು.

3. ಲೆಕ್ಕಶೀರ್ಷಿಕೆ ಪಿ–2021 ವಸತಿ ಸೌಲಭ್ಯಗಳು (ವ್ಯಕ್ತಿಗತ ಸೌಲಭ್ಯಗಳು) ಅಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವರ್ಗದವರಿಗೆ ಮನೆಗಳ ನಿರ್ಮಾಣಕ್ಕಾಗಿ ಪ್ರತಿ ಮನೆಗೆ ರೂ.4.00 ಲಕ್ಷಗಳಂತೆ 30 ಮನೆಗಳು ಪ್ರತಿ ವಾರ್ಡ್‌ಗೆ ಮತ್ತು ಲೆಕ್ಕಶೀರ್ಷಿಕೆ ಪಿ–2340 ಅಡಿಯಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತ ಹಾಗೂ ಆರ್ಥಿಕ ದುರ್ಬಲ ವರ್ಗದವರಿಗೆ ಮನೆಗಳ ನಿರ್ಮಾಣಕ್ಕಾಗಿ ಪ್ರತಿ ಮನೆಗೆ ರೂ.4.00 ಲಕ್ಷಗಳಂತೆ 15 ಮನೆಗಳು ಪ್ರತಿ ವಾರ್ಡ್‌ಗೆ ಹಂಚಿಕೆ ಮಾಡಲಾಗಿದ್ದು, ಒಂದು ವೇಳೆ ಯಾವುದೇ ವಾರ್ಡ್ ವ್ಯಾಪ್ತಿಯಲ್ಲಿ ಫಲಾನುಭವಿಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ವಾರ್ಡ್‌ಗಳ ಉಳಿಕೆ ಅನುದಾನವನ್ನು ಸದ್ಬಳಕೆ ಮಾಡುವ ಹಿತದೃಷ್ಟಿಯಿಂದ ಹೆಚ್ಚು ಬೇಡಿಕೆಯಿರುವಂತಹ ಇತರೇ ವಾರ್ಡ್‌ಗಳಿಗೆ ಸಮುಚಿತ ಮಾರ್ಗದಲ್ಲಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ ಅನುದಾನ ಮರುಹೊಂದಾಣಿಕೆ ಮಾಡಿಕೊಳ್ಳಲು ತೀರ್ಮಾನಿಸಲಾಯಿತು.

4. ಕಲ್ಯಾಣ ಕಾರ್ಯಕ್ರಮಗಳ ಲೆಕ್ಕಶೀರ್ಷಿಕೆ ಪಿ–0224ರಡಿ ಪೌರಕಾರ್ಮಿಕರ, ಗ್ಯಾಂಗ್‌ಮೆನ್‌ಗಳ ಮತ್ತು ಮಾಲೀಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲು ರೂ.500.00 ಲಕ್ಷಗಳ ಅನುದಾನವನ್ನು ಕಲ್ಯಾಣ ಶೀರ್ಷಿಕೆಯಲ್ಲಿ ನಿಗಧಿ ಪಡಿಸಲಾಗಿದ್ದು, ಇದುವರೆಗೆ ಸದರಿ ಲೆಕ್ಕಶೀರ್ಷಿಕೆ/ಕಾರ್ಯಕ್ರಮ ಶಿಕ್ಷಣ ಇಲಾಖೆಯಿಂದ ಅನುಷ್ಟಾನಗೊಳಿಸಲಾಗುತ್ತಿದ್ದು ಯಶಸ್ವಿಯಾಗಿ ಅನುಷ್ಠಾನಗೊಂಡಿರದ ಕಾರಣ, ಸದರಿ ಕಾರ್ಯಕ್ರಮವನ್ನು ಪಾಲಿಕೆಯ ಕಲ್ಯಾಣ ಶಾಖೆಯಿಂದ ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

ಅಧ್ಯಕ್ಷರು

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

50
(8)

5. ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳಲ್ಲಿ (ಅ) ಮೆಟ್ರಿಕ್ ಪೂರ್ವ, (ಆ) ಮೆಟ್ರಿಕ್ ನಂತರ ಮತ್ತು (ಇ) ಉನ್ನತ ವ್ಯಾಸಂಗ ಮಾಡುತ್ತಿರುವ (i) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ, (ii) ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು, ಮತ್ತು (iii) ಪೌರಕಾರ್ಮಿಕರು ಹಾಗೂ "ಡಿ" ಗ್ರೂಪ್ ಗ್ಯಾಂಗ್ ಮೆನ್ ಮಾಲಿಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ವಿವಿಧ ಯೋಜನೆಗಳಿಗೆ ವಿಭಿನ್ನ ವಿಷಯ ಹಾಗೂ ವರ್ಗವಾರು ಮಾರ್ಗಸೂಚಿಗಳು ಜಾರಿಯಲ್ಲಿದ್ದು, ವ್ಯಾಸಂಗದ ವಿಷಯ (Different Courses), ಶಾಲಾ ಕಾಲೇಜುಗಳು (Government, Government Aided, Private etc.) ಇತ್ಯಾದಿಗಳಿಗೆ ಸಂಬಂಧಿಸಿಂತೆ ವ್ಯತ್ಯಾಸವಿದ್ದು ಗೊಂದಲವಿರುತ್ತದೆ.

ಈ ಬಗ್ಗೆ ಪರಿಶೀಲಿಸಲಾಗಿ, (ಅ) ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡುವ ಕಾರ್ಯಕ್ರಮದಲ್ಲಿ ಒಂದೇ ರೀತಿಯ ಯೋಜನೆಯನ್ನು ನಿಯಮಾನುಸಾರ ರೂಪಿಸಲು, (ಆ) ಪೌರಕಾರ್ಮಿಕರಿಗೆ ಸಂಬಂಧಿಸಿದಂತೆ ಪಾಲಿಕೆಯಲ್ಲಿ ಜಾರಿಯಲ್ಲಿರುವ ಯೋಜನೆಯನ್ನು ಮುಂದುವರೆಸಲು ಮತ್ತು (ಇ) ಸರ್ಕಾರಿ, ಸರ್ಕಾರಿ ಅನುದಾನಿತ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಫಲಾನುಭವಿಗಳಿಗೆ ಶಿಕ್ಷಣ ಕಾರ್ಯಕ್ರಮಗಳಡಿಯಲ್ಲಿ ಪ್ರೋತ್ಸಾಹ ಧನ ನೀಡುವ ಯೋಜನೆಯನ್ನು ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ಸುತ್ತೋಲೆ ಸಂಖ್ಯೆ:1) ನಅಇ 32 ಪಿಎನ್‌ಜಿ 2015 ದಿನಾಂಕ:30.07.2015, 2) ನಅಇ 43 ಪಿಎನ್‌ಜಿ 2015 ದಿನಾಂಕ:29.03.2016 ಹಾಗೂ 3)ನಅಇ 39 ಪಿಎನ್‌ಜಿ 2015 ದಿನಾಂಕ:09.10.2015 ರ ರೀತ್ಯ ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

ಮುಂದುವರೆದಂತೆ, ಶೈಕ್ಷಣಿಕ ಕಾರ್ಯಕ್ರಮಗಳಡಿಯಲ್ಲಿ ಖಾಸಗಿ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಎಲ್ಲಾ ವರ್ಗಗಳ ಫಲಾನುಭವಿಗಳಿಗೆ ಪ್ರೋತ್ಸಾಹ ಧನ ನೀಡುವ ಸಂಬಂಧ ಸರ್ಕಾರದ ಪೂರ್ವಾನುಮತಿ ಮತ್ತು ಪಾಲಿಕೆಯ ಅನುದಾನ ಲಭ್ಯತೆಯ ಮೇರೆಗೆ ಯೋಜನೆಯನ್ನು ಅನುಷ್ಠಾನಗೊಳಿಸಲು ವಿಶೇಷ ಆಯುಕ್ತರು (ಕಲ್ಯಾಣ)ರವರಿಗೆ ನಿರ್ದೇಶನ ನೀಡಲಾಯಿತು.

6. ಎ. ಮಹಿಳಾ ಕಲ್ಯಾಣ ಕಾರ್ಯಕ್ರಮ ಲೆಕ್ಕಶೀರ್ಷಿಕೆ–1937ರಡಿ ಬರುವ ಹೊಲಿಗೆ/ನಿಟ್ಟಿಂಗ್/ ಎಂಬ್ರಾಯಿಡರಿ ತರಬೇತಿ ಯೋಜನೆಯಡಿ 203 ಗೌರವಧನ ಆಧಾರದಲ್ಲಿ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು ಇವರಿಗೆ ಪ್ರಸ್ತುತ ನೀಡುತ್ತಿರುವ ಗೌರವಧನದನ್ವಯ, ಗೌರವಧನಕ್ಕಾಗಿಯೇ ವಾರ್ಷಿಕ ಅಂದಾಜು ರೂ.200.00 ಲಕ್ಷಗಳ ಅನುದಾನ ಮತ್ತು ಹೊಲಿಗೆ ತರಬೇತಿ ಕೇಂದ್ರಗಳಿಗೆ, ಹೊಲಿಗೆ ಯಂತ್ರಗಳು ಹಾಗೂ ಉಪಕರಣಗಳು, ತರಬೇತಿ ಸಾಮಗ್ರಿಗಳು, ಕಟ್ಟಡ ಬಾಡಿಗೆ, ಹೊಲಿಗೆ ಯಂತ್ರಗಳ ದುರಸ್ಥಿ, ಶಿಷ್ಯ ವೇತನ, ಇತ್ಯದಿ ಯೋಜನೆಗಳಿಗೆ ರೂ.300.00 ಲಕ್ಷಗಳು ಸೇರಿದಂತೆ ಒಟ್ಟಾರೆ ಸುಮಾರು ಕನಿಷ್ಟ

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ರೂ.500.00 ಲಕ್ಷಗಳ ಅವಶ್ಯಕತೆಯಿರುತ್ತದೆ. ಆದರೆ, ಈ ಲೆಕ್ಕಶೀರ್ಷಿಕೆಯಡಿ ಕೇವಲ ರೂ.1010.00 ಲಕ್ಷಗಳನ್ನು ಮಾತ್ರ ಒದಗಿಸಿದ್ದು. ಅನುದಾನದ ಕೊರತೆ ಬೀಳುತ್ತದೆ. ಕಾರಣ ಮೇಲ್ಕಂಡ ಉದ್ದೇಶಗಳಿಗೆ ಅನುದಾನವನ್ನು ಕಾಯ್ದಿರಿಸಲು ತೀರ್ಮಾನಿಸಲಾಯಿತು.

ಬಿ. 2016–17 ನೇ ಸಾಲಿನ ಭಾಷಣ ಮತ್ತು ಆಯವ್ಯಯ ಅಂದಾಜುಗಳ ಪುಸ್ತಕದಲ್ಲಿ ಮಹಿಳಾ ಸದಸ್ಯರ ವಾರ್ಡ್‌ಗಳಿಗೆ ತಲಾ ರೂ.10.00 ಲಕ್ಷಗಳೆಂದು ನಮೂದಿಸಿದ್ದು ಅದಕ್ಕೆ ತಕ್ಕಂತೆ ಸಾಕಷ್ಟು ಅನುದಾನ ಒದಗಿಸದಿರುವುದರಿಂದ ರೂ. 10.00 ಲಕ್ಷಗಳ ಬದಲಾಗಿ ಪ್ರತಿ ಮಹಿಳಾ ಸದಸ್ಯರ ವಾರ್ಡ್‌ಗೆ ತಲಾ ರೂ.5.00 ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಿ, ಸದರಿ ಅನುದಾನವನ್ನು ಕಾಮಗಾರಿ ಯೋಜನೆಗಳನ್ನು ಹೊರತುಪಡಿಸಿ ಪಾಲಿಕೆಯಲ್ಲಿ ಜಾರಿಯಲ್ಲಿರುವ ಯಾವುದೇ ಕಲ್ಯಾಣ ಕಾರ್ಯಕ್ರಮಗಳಿಗೆ ಮಹಿಳಾ ಫಲಾನುಭವಿಗಳಿಗೆ ಮಾತ್ರ ಸದ್ವಿನಿಯೋಗ ಮಾಡಿಕೊಳ್ಳಲು ತೀರ್ಮಾನಿಸಲಾಯಿತು.

ಸಿ. ಈ ಹಿಂದೆ ಪಾಲಿಕೆಯ ಹೊಲಿಗೆ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆದಿರುವ ತರಬೇತುದಾರರಿಗೆ ಶಿಷ್ಯವೇತನ ಪಾವತಿಸಬೇಕಾಗಿದ್ದು, ಅನುದಾನದ ಕೊರತೆ ಉಂಟಾಗಿರುತ್ತದೆ. ಕಾರಣ ಈ ಸಂಬಂಧ ವಿಶೇಷ/ಹೆಚ್ಚುವರಿ ಅನುದಾನ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು. ಮುಂದುವರೆದಂತೆ, ಈ ಹಿಂದೆ ಎಸ್.ಸಿ./ಎಸ್.ಟಿ. ಫಲಾನುಭವಿಗಳಿಗೆ ಮಾತ್ರ ಶಿಷ್ಯವೇತನ ನೀಡುತ್ತಿದ್ದು, 2016–17ನೇ ಸಾಲಿನಿಂದ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರಿಗೂ ಸಹ ಶಿಷ್ಯವೇತನ ಪಾವತಿಸಲು ತೀರ್ಮಾನಿಸಲಾಯಿತು.

ಡಿ. ಈ ಹಿಂದೆ ಪಾಲಿಕೆ ಸಭೆಯಲ್ಲಿ ಪ್ರತಿ ಹೊಲಿಗೆ ತರಬೇತಿ ಫಲಾನುಭವಿಗಳಿಗೆ ವಾರ್ಷಿಕ ರೂ.3,000ಗಳ ಶಿಷ್ಯವೇತನ ಪಾವತಿಸಲು ತೀರ್ಮಾನಿಸಿದ್ದು, ಅನುದಾನದ ಕೊರತೆಯಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿರುವುದಿಲ್ಲ. ಸಮಿತಿಯಲ್ಲಿ ಈ ಬಗ್ಗೆ ಸುಧೀರ್ಘವಾಗಿ ಚರ್ಚಿಸಿದ ನಂತರ ಸರ್ಕಾರ ಪೂರ್ವಾನುಮತಿ ಮತ್ತು ಸೂಕ್ತ ಅನುದಾನದ ಲಭ್ಯತೆ ಮೇರೆಗೆ ಪಾಲಿಕೆಯ ಎಲ್ಲಾ ಹೊಲಿಗೆ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆದ ಎಲ್ಲಾ ವರ್ಗದ ಫಲಾನುಭವಿಗಳಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

7. 2016–17ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳಡಿಯಲ್ಲಿ ಹಮ್ಮಿಕೊಳ್ಳಲು ಅನುಮೋದಿಸಿರುವ ಕಲ್ಯಾಣ ಕಾರ್ಯಕ್ರಮ ಹಾಗೂ ಕಾಮಗಾರಿ ಯೋಜನೆಗಳ ಪಟ್ಟಿಯನ್ನು ಅನುಬಂಧ (I)ರಲ್ಲಿ ಲಗತ್ತಿಸಿದೆ.

8. ಮೇಲ್ಕಂಡ ಮಾರ್ಪಾಡುಗಳೊಂದಿಗೆ, ವಿಶೇಷ ಆಯುಕ್ತರು (ಕಲ್ಯಾಣ) ರವರ ಪ್ರಸ್ತಾವನೆಯಲ್ಲಿ ವಿವರಿಸಿರುವ ಉಳಿದೆಲ್ಲಾ ಅಂಶಗಳನ್ನು ಯಥಾವತ್ತಾಗಿ ಅನುಮೋದಿಸಲು ಸಮಿತಿಯು ತೀರ್ಮಾನಿಸಿತು.

V. Hamida
ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕ್ರ.ಸಂ.	ಸದಸ್ಯರುಗಳ ಹೆಸರು	ಪದನಾಮ	ಸಹಿ
1.	ಶ್ರೀ ವಿ. ಏಳುಮಲೈ	ಅಧ್ಯಕ್ಷರು	V. Elumalai
2.	ಶ್ರೀಮತಿ ಎಂ. ಪದ್ಮಾವತಿ ಶ್ರೀನಿವಾಸ್	ಸದಸ್ಯರು	Padmavathi. M
3.	ಶ್ರೀಮತಿ ಲಲಿತಾ ಟಿ. ನಾರಾಯಣ	ಸದಸ್ಯರು	
4.	ಶ್ರೀಮತಿ ಶಶಿಕಲಾ ಜಿ.ವಿ.	ಸದಸ್ಯರು	
5.	ಶ್ರೀ ಜಯಪ್ರಕಾಶ್ ಎಂ.ಸಿ.	ಸದಸ್ಯರು	
6.	ಶ್ರೀಮತಿ ದೀಪಾ ನಾಗೇಶ್	ಸದಸ್ಯರು	Deepa Nagesh
7.	ಶ್ರೀಮತಿ ಗಂಗಮ್ಮ	ಸದಸ್ಯರು	Gangamma
8.	ಶ್ರೀ ವಾಸುದೇವ್ ಎಸ್.	ಸದಸ್ಯರು	
9.	ಶ್ರೀಮತಿ ನೇತ್ರಾವತಿ ಕೃಷ್ಣೇಗೌಡ	ಸದಸ್ಯರು	Nethravathi
10.	ಶ್ರೀಮತಿ ಮಮತ ಕೆ.ಎಂ.	ಸದಸ್ಯರು	
11.	ಶ್ರೀ ಮಹಮದ್ ಜಮೀರ್ ಷಾ	ಸದಸ್ಯರು	M. Jameer Sha

ಅನುಬಂಧ-1

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

2016-17ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಅನುಮೋದಿಸಲಾದ ವಿವಿಧ ಕಾರ್ಯಕ್ರಮಗಳ ಪಟ್ಟಿ

ಅ) ಶೇ.24.10 ರಡಿಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು:-

1. ವ್ಯಕ್ತಿಗತ ಸೌಲಭ್ಯಗಳಿಗೆ ಸಹಾಯ ಧನ ನೀಡುವ ಕಾರ್ಯಕ್ರಮಗಳು ಪಿ-ಕೋಡ್-0224

ಕ್ರ.ಸಂ	ಕಾರ್ಯಕ್ರಮಗಳ ವಿವರ
1)	ಪಾಲಿಕೆಯ ಪೌರಕಾರ್ಮಿಕ, ಗ್ಯಾಂಗ್ ಮ್ಯಾನ್ ಮತ್ತು ಮಾಲಿಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ Financial Assistance to Children of Pourakarmika's Gangmen & Malies of BBMP

2. ವ್ಯಕ್ತಿಗತ ಸೌಲಭ್ಯಗಳಿಗೆ ಸಹಾಯ ಧನ ನೀಡುವ ಕಾರ್ಯಕ್ರಮಗಳು ಪಿ-ಕೋಡ್-2020

ಕ್ರ.ಸಂ	ಕಾರ್ಯಕ್ರಮಗಳ ವಿವರ
1)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೌರಕಾರ್ಮಿಕರು ಹಾಗೂ ಕಡಿಮೆ ವರಮಾನವುಳ್ಳ ಗ್ರೂಪ್ ಡಿ ನೌಕರರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಧನ ಸಹಾಯ Financial Support to PK's & Low income earning group "D" Employees of BBMP for Higher Education
2)	ವಿವಿಧ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿಶೇಷ ನೆರವು ನೀಡುವ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ನೀಡುವುದು.
3)	ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ಥಿಕ ಸ್ವಾವಲಂಬನೆ ಯೋಜನೆ-(ಅಭಿವೃದ್ಧಿ ನಿಗಮಗಳ/ಬ್ಯಾಂಕ್ ಸಾಲ ಪಡೆದ ಫಲಾನುಭವಿಗಳಿಗೆ ಶೇ.25 ರಷ್ಟು ಸಹಾಯ ಧನ) Economic Support Programme for Unemployed youth -(25% Subsidy for self employment through Development Corporations/Bank Loan)
4)	ಸಾರಥಿ ಯೋಜನೆಯಡಿ ಆಟೋ ರೀಕ್ಷಾಗಳನ್ನು ಕೊಳ್ಳಲು ಶೇ.25 ರಷ್ಟು ಸಹಾಯಧನ ನೀಡುವುದು Economic Support Programme for Unemployed youth for purchase of passenger Auto under the Sarathi Scheme-(25% Subsidy for self employment through Development Corporations/Bank Loan)
5)	ಪರಿಶಿಷ್ಟ ಜಾತಿ/ಪಂಗಡದ ವೃತ್ತಿನಿರತ ವಕೀಲರಿಗೆ ಕಾನೂನು ಪುಸ್ತಕಗಳನ್ನು ಖರೀದಿಸಲು ಪಾಲಿಕೆಯಿಂದ ಆರ್ಥಿಕ ಸಹಾಯ ನೀಡುವುದು.
6)	ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್‌ಗಳ ಖರೀದಿಗಾಗಿ ಆರ್ಥಿಕ ಸಹಾಯ.

3. ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು (ವ್ಯಕ್ತಿಗತ) ಪಿ-ಕೋಡ್-2022

ಕ್ರ.ಸಂ	ಕಾರ್ಯಕ್ರಮಗಳ ವಿವರ
1)	ವಾಹನ ಚಾಲನ ತರಬೇತಿ Driving Training
2)	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಉಪಯುಕ್ತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು (ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ). Usefull skill development training program for SC/ST's (with the approval of competent authority)

ಅಧ್ಯಕ್ಷರು

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

4.ಸಮುದಾಯ ಸೌಲಭ್ಯಗಳಿಗೆ ಸಹಾಯ ಧನ ನೀಡುವ ಕಾರ್ಯಕ್ರಮಗಳು ಪಿ–ಕೋಡ್–2652

ಕ್ರ.ಸಂ.	ಕಾರ್ಯಕ್ರಮಗಳ ವಿವರ
1)	ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದ ಆಡಳಿತ ಮಂಡಳಿ ನಡೆಸುವ ಶಾಲಾ ಸಂಸ್ಥೆಗಳು/ವಿದ್ಯಾರ್ಥಿ ನಿಲಯಗಳಿಗೆ ಅನುದಾನ Grants to Educational Institutions/ Hostels run by SC/ST management
2)	ಸಮಾಜ ಕಲ್ಯಾಣ ಇಲಾಖೆಯು ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳ ಅಭಿವೃದ್ಧಿ, ಹೆಚ್ಚುವರಿಯಾಗಿ ಕಟ್ಟಡ ನಿರ್ಮಾಣ ಹಾಗೂ ಹೊಸದಾಗಿ ವಿದ್ಯಾರ್ಥಿ ನಿಲಯಗಳ ಕಟ್ಟಡಗಳನ್ನು ನಿರ್ಮಿಸಲು Construction of New Hostels, providing Additional accommodation & Improvements to SC/ST Hostels run by Social Welfare Department, GoK
3)	ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಮತ್ತು ವ್ಯಕ್ತಿವಿಕಾಸ ಕಾರ್ಯಾಗಾರ ನಡೆಸಲು Career guidance workshop & Workshop on Personality Development to Students

5. ಇತರೆ ಕಾರ್ಯಕ್ರಮಗಳು (ವ್ಯಕ್ತಿಗತ ಮತ್ತು ಸಮುದಾಯ) ಪಿ–ಕೋಡ್–2023 :–

ಕ್ರ.ಸಂ	ಕಾರ್ಯಕ್ರಮಗಳ ವಿವರ
1)	ಹೊಲಿಗೆ ತರಭೇತುದಾರರಿಗೆ ಶಿಷ್ಯ ವೇತನ (ಸ್ಟೈಫಂಡ್)
2)	ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯೋಗಸ್ಥ ಮಹಿಳೆಯರಿಗೆ ಹೊಸದಾಗಿ ಹಾಸ್ಟೆಲ್‌ಗಳನ್ನು ನಿರ್ಮಿಸಲು. Grants for construction of working women's hostels for SC/ST
3)	ವೈದ್ಯಕೀಯ ಸಹಾಯ / ಸೇವೆಗಳು, ಧೌರ್ಜನ್ಯ, ನೈಸರ್ಗಿಕ ವಿಕೋಪಗಳಲ್ಲಿ ಬಲಿಯಾದವರಿಗೆ ಹಾಗೂ ಗಂಭೀರ ಸ್ವರೂಪದ ಕಾಯಿಲೆಗಳಿಂದ ಭಳಲುತ್ತಿರುವವರಿಗೆ ಆರ್ಥಿಕ ಸಹಾಯ Medical Aid/Services to Victims of Riots, Natural Calamities and Financial Aid to the person's suffering from severe Chronic diseases
4)	ಪೌರ ಕಾರ್ಮಿಕರು, ಗ್ಯಾಂಗ್‌ಮೆನ್ ಹಾಗೂ ಮಾಲಿಗಳ ಕಾಲೋನಿಗಳ ಅಭಿವೃದ್ಧಿಗಾಗಿ ಕಲ್ಯಾಣ ಕಾರ್ಯಕ್ರಮಗಳು. Welfare programmes to Pourakarmika's Gangmen & Malis for their colony development.
5)	ಈಗಾಗಲೇ ರೂಪಿಸಿರುವ ಕಾರ್ಯಕ್ರಮಗಳನ್ನು ಹೊರತುಪಡಿಸಿ ಇತರೆ ಯಾವುದಾದರು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು. Any Other useful scheme's programmes other than the above for the Economic Development of SC/ST's
6)	ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನಸಾಂದ್ರಿತ ಪ್ರದೇಶಗಳಲ್ಲಿ ಗ್ರಂಥಾಲಯಗಳ ನಿರ್ಮಾಣ ಮತ್ತು ನಿರ್ವಹಣೆ, Construction and Maintenance of Libraries in Areas Predominantly Populated by Scheduled Caste/Scheduled Tribe.
7)	ಮಾಹಿತಿ, ಶಿಕ್ಷಣ ಹಾಗೂ ಸಂಪರ್ಕ ಕಾರ್ಯಕ್ರಮ. Information, Education and Communication Programme.

ಅಧ್ಯಕ್ಷರು

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಆ) ಶೇ.24.01ರಬಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗದವರಿಗೆ ಕೈಗೊಳ್ಳುವ ಕಾಮಗಾರಿಗಳು:-

1) ಮೂಲಭೂತ ಸೌಕರ್ಯಗಳು (ಸಮುದಾಯ ಕಾರ್ಯಕ್ರಮ) ಪಿ-ಕೋಡ್1878:-

ಕ್ರ.ಸಂ	ಕಾರ್ಯಕ್ರಮಗಳ ವಿವರ
1)	ವೈಯುಕ್ತಿಕ ಶೌಚಾಲಯ ನಿರ್ಮಾಣ Individual Toilets Construction
2)	ಯು.ಜಿ.ಡಿ. ಮತ್ತು ನೀರಿನ ಸಂಪರ್ಕ ಪಡೆಯಲು ಸಹಾಯ ಧನ Financial Assistance to U.G.D & Water connection
3)	ಪರಿಶಿಷ್ಟ ಜಾತಿ/ಪಂಗಡದವರು ವಾಸಿಸುವ ಪ್ರದೇಶಗಳಲ್ಲಿ ರಸ್ತೆ ನಿರ್ಮಾಣ, ಚರಂಡಿ, ಬೀದಿ ದೀಪಗಳು ಅಳವಡಿಸುವುದು ಹಾಗೂ ಇತರೆ ಕಾಮಗಾರಿಗಳು. Construction and Maintenance of Roads, Drainage, Street Lights, and Other Works in Areas Predominantly Populated by Scheduled Caste/Scheduled Tribe.

2) ವಸತಿ ಸೌಲಭ್ಯಗಳು (ವ್ಯಕ್ತಿಗತ ಸೌಲಭ್ಯ) ಪಿ-ಕೋಡ್2021:-

ಕ್ರ.ಸಂ	ಕಾರ್ಯಕ್ರಮಗಳ ವಿವರ
1)	ಪಕ್ಕಾ ಮನೆ ನಿರ್ಮಾಣ Individual House Construction
2)	ಕಚ್ಚಾ ಮನೆ ನಿರ್ಮಾಣ Renovation of SC/ST Houses
3)	ವಿ.ಎಸ್.ಆಚಾರ್ಯ-ಅಡುಗೆ ಅನಿಲ ರಹಿತ ಕುಟುಂಬಗಳಿಗೆ ಅನಿಲ ಸಂಪರ್ಕ ಪಡೆಯಲು ಸಹಾಯ ಧನ. Financial Assistance to Domestic Gas Connection-Under V.S.Acharya Scheme.

ಇ) ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು

1) ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು:-ಪಿ-ಕೋಡ್-1936 ಮತ್ತು ಪಿ-ಕೋಡ್-2337

ಕ್ರ.ಸಂ	ಕಾರ್ಯಕ್ರಮಗಳ ವಿವರ
1	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೌರಕಾರ್ಮಿಕರು ಹಾಗೂ ಕಡಿಮೆ ವರಮಾನವುಳ್ಳ ಗ್ರೂಪ್ ಡಿ ನೌಕರರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಧನ ಸಹಾಯ Financial Support to PK's & Low income earning group "D" Employees of BBMP for Higher Education
2	ಪಾಲಿಕೆಯ ಪೌರಕಾರ್ಮಿಕ, ಗ್ಯಾಂಗ್ ಮ್ಯಾನ್ ಮತ್ತು ಮಾಲಿಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ Financial Assistance to Children of Pourakarmika's Gangmen & Malies of BBMP
3	ವಿವಿಧ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿಶೇಷ ನೆರವು ನೀಡುವ ಯೋಜನೆಯಡಿಯಲ್ಲಿ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ನೀಡುವುದು.
4	ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ಥಿಕ ಸ್ವಾವಲಂಬನೆ ಯೋಜನೆ-(ಅಭಿವೃದ್ಧಿ ನಿಗಮಗಳ/ಬ್ಯಾಂಕ್ ಸಾಲ ಪಡೆದ ಫಲಾನುಭವಿಗಳಿಗೆ ಶೇ.25 ರಷ್ಟು ಸಹಾಯ ಧನ) Economic Support Programme for Unemployed youth -(25% Subsidy for self employment through Development Corporations/Bank Loan)
5	ಸಾರಥಿ ಯೋಜನೆಯಡಿ ಆಟೋ ರೀಕ್ಷಾಗಳನ್ನು ಕೊಳ್ಳಲು ಶೇ.25 ರಷ್ಟು ಸಹಾಯಧನ ನೀಡುವುದು Economic Support Programme for Unemployed youth for purchase of passenger Auto under the Sarathi Scheme-(25% Subsidy for self employment through Development Corporations/Bank Loan)

ಅಧ್ಯಕ್ಷರು

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕ್ರ.ಸಂ	ಕಾರ್ಯಕ್ರಮಗಳ ವಿವರ
6	ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವೃತ್ತಿನಿರತ ವಕೀಲರಿಗೆ ಕಾನೂನು ಪುಸ್ತಕಗಳನ್ನು ಖರೀದಿಸಲು ಪಾಲಿಕೆಯಿಂದ ಆರ್ಥಿಕ ಸಹಾಯ ನೀಡುವುದು.
7	ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್‌ಗಳ ಖರೀದಿಗಾಗಿ ಆರ್ಥಿಕ ಸಹಾಯ.
8	ವಾಹನ ಚಾಲನ ತರಬೇತಿ Driving Training
9	ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಉಪಯುಕ್ತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು (ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ). Usefull skill development training program for BCM (with the approval of competent authority)
10	ಸಮಾಜ ಕಲ್ಯಾಣ ಇಲಾಖೆಯು ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳ ಅಭಿವೃದ್ಧಿ, ಹೆಚ್ಚುವರಿಯಾಗಿ ಕಟ್ಟಡ ನಿರ್ಮಾಣ ಹಾಗೂ ಹೊಸದಾಗಿ ವಿದ್ಯಾರ್ಥಿ ನಿಲಯಗಳ ಕಟ್ಟಡಗಳನ್ನು ನಿರ್ಮಿಸಲು Construction of New Hostels, providing Additional accommodation & Improvements to BCM Hostels run by Social Welfare Department, GoK
11	ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಮತ್ತು ವ್ಯಕ್ತಿವಿಕಾಸ ಕಾರ್ಯಾಗಾರ ನಡೆಸಲು Career guidance workshop & Workshop on Personality Development to Students
12	ಹೊಲಿಗೆ ತರಭೇತುದಾರರಿಗೆ ಶಿಷ್ಯ ವೇತನ (ಸ್ಟೈಫಂಡ್)
13	ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ಉದ್ಯೋಗಸ್ಥ ಮಹಿಳೆಯರಿಗೆ ಹೊಸದಾಗಿ ಹಾಸ್ಟೆಲ್‌ಗಳನ್ನು ನಿರ್ಮಿಸಲು. Grants for construction of working women's hostels for BCM
14	ವೈದ್ಯಕೀಯ ಸಹಾಯ / ಸೇವೆಗಳು, ಧೌರ್ಜನ್ಯ, ನೈಸರ್ಗಿಕ ವಿಕೋಪಗಳಲ್ಲಿ ಬಲಿಯಾದವರಿಗೆ ಹಾಗೂ ಗಂಭೀರ ಸ್ವರೂಪದ ಕಾಯಿಲೆಗಳಿಂದ ಭಳಲುತ್ತಿರುವವರಿಗೆ ಆರ್ಥಿಕ ಸಹಾಯ Medical Aid/Services to Victims of Riots, Natural Calamities and Financial Aid to the person's suffering from severe Chronic diseases
15	ಈಗಾಗಲೇ ರೂಪಿಸಿರುವ ಕಾರ್ಯಕ್ರಮಗಳನ್ನು ಹೊರತುಪಡಿಸಿ ಇತರೆ ಯಾವುದಾದರು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು. Any Other useful scheme's programmes other than the above for the Economic Development of BCMs
16	ಮಾಹಿತಿ, ಶಿಕ್ಷಣ ಹಾಗೂ ಸಂಪರ್ಕ ಕಾರ್ಯಕ್ರಮ. Information, Education and Communication Programme.

2) **<u>ಕಾಮಗಾರಿ ವಿಭಾಗದ ಕಾರ್ಯಕ್ರಮಗಳು:-</u>**

<u>ಹಿಂದುಳಿದ ಮತ್ತು ಅಲ್ಪ ಸಂಖ್ಯಾತರು ಹಾಗೂ ಆರ್ಥಿಕವಾಗಿ ದುರ್ಬಲವರ್ಗದವರಿಗೆ ಮನೆಗಳ ನಿರ್ಮಾಣ ಪಿ-ಕೋಡ್ 2340:-</u>

ಕ್ರ.ಸಂ	ಕಾರ್ಯಕ್ರಮಗಳ ವಿವರ
1)	ಹಿಂದುಳಿದ ಮತ್ತು ಅಲ್ಪ ಸಂಖ್ಯಾತರು ಹಾಗೂ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಪಕ್ಕಾ ಮನೆ ನಿರ್ಮಾಣ. Individual House Construction
2)	ಹಿಂದುಳಿದ ಮತ್ತು ಅಲ್ಪ ಸಂಖ್ಯಾತರು ಹಾಗೂ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಕಚ್ಚಾ ಮನೆ ನಿರ್ಮಾಣ. Renovation of Houses
3)	ವಿ.ಎಸ್.ಆಚಾರ್ಯ-ಅಡುಗೆ ಅನಿಲ ರಹಿತ ಕುಟುಂಬಗಳಿಗೆ ಅನಿಲ ಸಂಪರ್ಕ ಪಡೆಯಲು ಸಹಾಯ ಧನ ನೀಡುವುದು.

ಅಧ್ಯಕ್ಷರು

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಈ) ರಾತ್ರಿ ತಂಗುದಾಣಗಳ ನಿರ್ಮಾಣ ಮತ್ತು ನಿರ್ವಹಣೆ ಪಿ-ಕೋಡ್ 2583:-

ಕ್ರ.ಸಂ	ಪಿ-ಕೋಡ್	ಕಾರ್ಯಕ್ರಮಗಳು
1	2583	ರಾತ್ರಿ ತಂಗುದಾಣಗಳ ನಿರ್ಮಾಣ ಮತ್ತು ನಿರ್ವಹಣೆ Construction & Maintenance of Night Shelters

ಉ) ಪಾಲಿಕೆ ವ್ಯಾಪ್ತಿಯಲ್ಲಿನ ನಗರ ಸಭೆ/ಪುರ ಸಭೆ ಪ್ರದೇಶದಲ್ಲಿನ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ

ಕ್ರ.ಸಂ	ಪಿ-ಕೋಡ್	ಕಾರ್ಯಕ್ರಮಗಳು
1	3071	ಪಾಲಿಕೆ ವ್ಯಾಪ್ತಿಯಲ್ಲಿನ ನಗರ ಸಭೆ/ಪುರ ಸಭೆ ಪ್ರದೇಶದಲ್ಲಿನ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ

ಊ) ಪಾಲಿಕೆ ವತಿಯಿಂದ ಕೊಳಚೆ ನಿರ್ಮೂಲನಾ ಮಂಡಳಿಗೆ ವೈಯಕ್ತಿಕ ಮನೆ ನಿರ್ಮಾಣಕ್ಕಾಗಿ ಹೊಂದಾಣಿಕೆ ಮೊತ್ತ

ಕ್ರ.ಸಂ	ಪಿ-ಕೋಡ್	ಕಾರ್ಯಕ್ರಮಗಳ ವಿವರ
1)	3149	ಪಾಲಿಕೆ ವತಿಯಿಂದ ಕೊಳಚೆ ನಿರ್ಮೂಲನಾ ಮಂಡಳಿಗೆ ವೈಯಕ್ತಿಕ ಮನೆ ನಿರ್ಮಾಣಕ್ಕಾಗಿ ಹೊಂದಾಣಿಕೆ ಮೊತ್ತ

ಋ) ಮಹಿಳಾ ಕಲ್ಯಾಣ ಕಾರ್ಯಕ್ರಮಗಳು:- ಪಿ-ಕೋಡ್-1937

ಕ್ರ.ಸಂ	ಕಾರ್ಯಕ್ರಮಗಳ ವಿವರ
1)	ಹೊಲಿಗೆ/ನಿಟ್ಟಿಂಗ್/ಎಂಬ್ರಾಯಿಡರಿ/ಕಾಯರ್/ ತರಬೇತಿ ಶಿಕ್ಷಕರು / ಮೇಲ್ವಿಚಾರಕರು / ದುರಸ್ಥಿಗಾರರಿಗೆ ಸಿಬ್ಬಂದಿಗಳಿಗೆ ಗೌರವ ಧನ. Honorarium to Tailoring/ Knitting/ Embroidery / Coir training centres staff
2)	ಹೊಲಿಗೆ/ ನಿಟ್ಟಿಂಗ್/ ಎಂಬ್ರಾಯಿಡರಿ /ಕಾಯರ್/ ಖಾಸಗಿ ಕಟ್ಟಡಗಳ ತರಬೇತಿ ಕೇಂದ್ರಗಳ ಬಾಡಿಗೆ Rent for Tailoring/ Knitting/ Embroidery / Coir training centres
3)	ಹೊಲಿಗೆ/ ನಿಟ್ಟಿಂಗ್/ ಎಂಬ್ರಾಯಿಡರಿ /ಕಾಯರ್/ ತರಬೇತಿ ಕೇಂದ್ರಗಳಲ್ಲಿ ಉಪಕರಣಗಳ ನಿರ್ವಹಣೆ ಮತ್ತು ದುರಸ್ತಿ M & R to Tailoring/ Knitting/ Embroidery / Coir training centres
4)	ಟೈಲರಿಂಗ್/ನಿಟ್ಟಿಂಗ್/ ಎಂಬ್ರಾಯಿಡರಿ/ಕಾಯರ್ ತರಬೇತಿದಾರರಿಗೆ ಶಿಷ್ಯ ವೇತನ. Stipend to Tailoring/ Knitting/ Embroidery / Coir training Trainees
5)	ಹೊಲಿಗೆ ತರಬೇತಿ ಕೇಂದ್ರಗಳಿಗೆ ಹೊಲಿಗೆ ಯಂತ್ರಗಳನ್ನು ಒದಗಿಸಲು ಹಾಗೂ ಹಾಲಿ ಕೇಂದ್ರಗಳಿಗೆ ಉಪಕರಣ ಗಳನ್ನು ಒದಗಿಸಲು. Supply of Tailoring Machines to Centres & Supply of Furnitures & Materials to Existing Training Centres
6)	ಮಹಿಳಾ ಸದ್ಯಸರು ಪ್ರತಿನಿಧಿಸುವ ವಾರ್ಡ್‌ಗಳಿಗೆ ವಿಶೇಷ ಅನುದಾನ (ಪಾಲಿಕೆಯಲ್ಲಿ ಜಾರಿಯಲ್ಲಿರುವ ಯಾವುದೇ ಕಲ್ಯಾಣ ಕಾರ್ಯಕ್ರಮಗಳಡಿಯಲ್ಲಿ {ಕಾಮಾಗಾರಿಗಳನ್ನು ಹೊರುತುಪಡಿಸಿ) ಆರ್ಹ ಮಹಿಳಾ ಫಲಾನುಭವಿಗಳನ್ನು ಪರಿಗಣಿಸುವುದು.

ಎ) ಬಿಬಿಎಂಪಿ ಶಾಲೆಯಲ್ಲಿನ ಹೆಣ್ಣುಮಕ್ಕಳಿಗೆ ಸ್ವಚ್ಚತಾ ಕಿಟ್ ವಿತರಣೆ: (ಪಿಕೋಡ್ 3047)

ಕ್ರ.ಸಂ.	ಕಾರ್ಯಕ್ರಮಗಳ ವಿವರ
1)	ಬಿಬಿಎಂಪಿ ಶಾಲೆಯಲ್ಲಿನ ಹೆಣ್ಣುಮಕ್ಕಳಿಗೆ ಸ್ವಚ್ಚತಾ ಕಿಟ್ ವಿತರಣೆ

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಏ) ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳು:– ಪಿಕೋಡ್–1938

ಕ್ರ.ಸಂ.	ಕಾರ್ಯಕ್ರಮಗಳ ವಿವರ
1)	ಮಾನಸಿಕ ಅಸ್ವಸ್ಥರಿಗೆ ಧನಸಹಾಯ ಧನ Incentive Scheme for Mentally Challenged
2)	ವಿಕಲಚೇತನರಿಗೆ ಸೇವಾ ಕೇಂದ್ರಗಳು ಪ್ರಾರಂಭಿಸಲು (ಸ್ವಯಂ ಸೇವಾ ಸಂಸ್ಥೆಗಳೊಂದಿಗೆ) Opening of Service centers (Through NGO's)
3)	ವಿಕಲಚೇತನರಿಗೆ ವಿವಿಧ ಉಪಕರಣಗಳನ್ನು ಒದಗಿಸಲು ಮತ್ತು ಹೆಚ್ಚುವರಿ ಚಕ್ರ ಅಳವಡಿಸಿರುವ ದ್ವಿಚಕ್ರ ಮೋಟಾರ್ ವಾಹನ ವಿತರಣೆ. Supply of equipments to Physically challenged and Motorized Two Wheeler

ಐ) ಸಾಮಾನ್ಯ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು:–ಪಿಕೋಡ್–2956

ಕ್ರ.ಸಂ	ಕಾರ್ಯಕ್ರಮಗಳು
1)	ಹಿರಿಯ ನಾಗರಿಕರಿಗೆ ಮದ್ಯಾಹ್ನದ ಬಿಸಿ ಊಟದ ಕಾರ್ಯಕ್ರಮ/ವೈದ್ಯಕೀಯ ಸೇವೆ Mid Day Meals / Medical Help to Senior Citizens
2)	ಎಲೆಕ್ಟ್ರಿಕಲ್ ವೈರ್‌ಮ್ಯಾನ್ ತರಬೇತಿ ಕೇಂದ್ರದ ಸಿಬ್ಬಂದಿಗಳಿಗೆ ಗೌರವ ಸಂಭಾವನೆ ಪಾವತಿಸಲು (ಪೂರ್ವ ವಲಯಕ್ಕೆ ಮಾತ್ರ) Honorarium to Electrical Wiremen Training Center Staff
3)	ಶಿಷ್ಯ ವೇತನ–ಎಲೆಕ್ಟ್ರಿಕಲ್ ವೈರ್‌ಮ್ಯಾನ್ ತರಬೇತುದಾರರಿಗೆ (ಪೂರ್ವ ವಲಯಕ್ಕೆ ಮಾತ್ರ) Stipend to Electrical Wiremen Trainees
4)	ಸಂಸ್ಕಾರ ಯೋಜನೆಯಡಿ ಅಂತ್ಯ ಸಂಸ್ಕಾರದ ಸಮಯದಲ್ಲಿ ಸಹಾಯಕರಾಗಿ ನೆರವಾಗುತ್ತಿರುವ ಬಡ ಕುಟುಂಬದ ಸರ್ವತೋಮುಖ ಅಭಿವೃದ್ಧಿಗೆ ಆರ್ಥಿಕ ಸಹಾಯ ನೀಡುವುದು

ಒ) ಟ್ರಾನ್ಸ್ ಜೆಂಡರ್ಸ್/ಮಂಗಳಮುಖಿಯರ ಕಲ್ಯಾಣ ಕಾರ್ಯಕ್ರಮಗಳು:–ಪಿ–ಕೋಡ್–3133

ಕ್ರ.ಸಂ	ಕಾರ್ಯಕ್ರಮಗಳು
1)	ವಿವಿಧ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿಶೇಷ ನೆರವು ನೀಡುವ ಯೋಜನೆಯಡಿಯಲ್ಲಿ ಟ್ರಾನ್ಸ್ ಜೆಂಡರ್ಸ್/ಮಂಗಳಮುಖಿಯರ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ನೀಡುವುದು.
2)	ಟ್ರಾನ್ಸ್ ಜೆಂಡರ್ಸ್ / ಮಂಗಳಮುಖಿಯರಿಗೆ ವೈದ್ಯಕೀಯ ಸಹಾಯ / ಸೇವೆಗಳು, ಧೌರ್ಜನ್ಯ, ನೈಸರ್ಗಿಕ ವಿಕೋಪಗಳಲ್ಲಿ ಬಲಿಯಾದವರಿಗೆ ಹಾಗೂ ಗಂಭೀರ ಸ್ವರೂಪದ ಕಾಯಿಲೆಗಳಿಂದ ಭಳಲುತ್ತಿರುವವರಿಗೆ ಆರ್ಥಿಕ ಸಹಾಯ Medical Aid/Services to Victims of Riots, Natural Calamities and Financial Aid to the Trans Genders suffering from severe Chronic diseases
3)	ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ಥಿಕ ಸ್ವಾವಲಂಬನೆ ಯೋಜನೆ (ವಾಹನ ಖರೀದಿ ಮತ್ತು ಸ್ವಯಂ ಉದ್ಯೋಗ) Economic Support Programme for Unemployed Youths
4)	ಟ್ರಾನ್ಸ್ ಜೆಂಡರ್ಸ್ / ಮಂಗಳಮುಖಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು Skill development training program for Trans Genders
5)	Trans Genders Awareness program

V. S [illegible]
ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ